ಮೆನ್‌ಷನ್ ಮಾಡಿ. ಅವರು ಈಗ ಬಿ. ಎ. ಸಿ. ಮೀಟಿಂಗ್‌ಗೆ ಕೂಡ ಬರುತ್ತಾರೆ. I will advice him to bring that matter before this Session.

ಶ್ರೀ. ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನಾನು ಬಹಳ ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಹೆಗ್ಗಡದೇವನ ಕೋಟೆಯಲ್ಲಿ ಹತ್ತಿಬೀಜ ರೈತರಿಗೆ ದೊರಕದೆ ರೈತರ ಧಾಳಿಯಾಗಿದೆ, ರೈತರ ಮೇಲೆ ಪೊಲೀಸರು ಗಲಾಟೆ ಮಾಡಿದ್ದಾರೆ. ಅಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದೆ.

ಅಧ್ಯಕ್ಷರು : ಅಲ್ಲಿಯ ಕ್ಷೇತ್ರದ ಶಾಸಕರಾದಂಥ ಶ್ರೀಮಾನ್ ನಾಗರಾಜ್ ಅವರು ಬಂದು ಬೆಳಿಗ್ಗೆ ನನಗೆ ಹೇಳಿದ್ದಾರೆ. ಖಂಡಿತವಾಗಿ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಳ್ಳೋಣ. ಅವರು ಆ ಕ್ಷೇತ್ರದ ಪ್ರತಿನಿಧಿಯಾಗಿರುವುದರಿಂದ ಅವರಿಗೆ ಒಂದು ಅವಕಾಶ ಕೊಟ್ಟ ನಂತರ ತಮಗೆಲ್ಲಾ ಅವಕಾಶ ಕೊಡುತ್ತೇನೆ. ಆ ಮೇಲೆ ಈ ವಿಚಾರವನ್ನು ತೆಗೆದುಕೊಳ್ಳೋಣ.

ಶ್ರೀ. ವಾಟಾಳ್ ನಾಗರಾಜ್ : ಆಯಿತು ಸಂತೋಷ. ಏಕೆಂದರೆ ಹತ್ತಿಬೀಜದ ಬೆಲೆ ಕಡಿಮೆ ಆಗಲೇ ಬೇಕು. ಶ್ರೀ. ನಾಗರಾಜ್ ಅವರು ಮಾತನಾಡಲಿ. ನಮ್ಮದೇನೂ ಅಭ್ಯಂತರ ಇಲ್ಲ.

9 ಶಾಸನ ರಚನೆ

(ಅ) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ 1998

ಪರ್ಯಾಲೋಚನಾ ಪ್ರಸ್ತಾವ

ಶ್ರೀ. ಎಂ. ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, 1998ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು

ಶ್ರೀ ಎಂ. ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಇದು ಅತ್ಯಂತ ಸರಳವಾದ ತಿದ್ದುಪಡಿ ಮತ್ತು ಅಷ್ಟೇ ಮಹತ್ತರ. ಈ ತಿದ್ದುಪಡಿಯನ್ನು ಸದನದ ಮುಂದೆ ತರಲು ಇಚ್ಛೆಪಡುತ್ತಿದ್ದೇನೆ. ಮೊದಲನೆಯದಾಗಿ, ಮಂಡಲ ಪಂಚಾಯಿತಿ ಎಂಬುದನ್ನು ಗ್ರಾಮ ಪಂಚಾಯಿತಿ ಎಂದು ಮಾಡುವುದು. ಇದೇನೂ ಅಷ್ಟು ಮಹತ್ವದ್ದಲ್ಲ. ಅದನ್ನು ಒಪ್ಪಬಹುದೆಂದು ಕೇಳುತ್ತೇನೆ. ಇನ್ನೊಂದು, ಕರ್ನಾಟಕದ ಎಲ್ಲಾ ಪಟ್ಟಣ ಪ್ರದೇಶಗಳಲ್ಲಿ ರಸ್ತೆಯ ಅಗಲೀಕರಣ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿದೆ. ಯಾವ ಮನೆಯ ಮಾಲೀಕ ಭೂಮಿಯನ್ನು ಕಳೆದುಕೊಳ್ಳುತ್ತಾನೋ, ಅವನಿಗೆ ಅದೇ ಜಾಗದಲ್ಲಿ ಮನೆ ಕಟ್ಟಿಕೊಳ್ಳಲು ವ್ಯವಸ್ಥೆ ಮಾಡುವುದು. ಒಂದು ವೇಳೆ ಅವನಿಗೆ ಅನುಕೂಲವಾಗಲಿಲ್ಲವಾದರೆ, ಬೇರೆ ಯಾವುದಾದರೂ ಪ್ರದೇಶ ಅಥವಾ ಅದೇ ಊರಿನಲ್ಲಿ ಸೈಟ್ ಇದ್ದರೆ, ಅನುಕೂಲವಾಗುವ ಕಡೆ ಎಷ್ಟು ಕಳೆದುಕೊಂಡಿರುತ್ತಾನೋ, ಅಷ್ಟನ್ನು ಕಟ್ಟಿಕೊಳ್ಳುವುದಕ್ಕೆ ಅನುಮತಿ ನೀಡುವುದು. ಇನ್ನೊಂದು, ವಿರೋಧ ಪಕ್ಷದ ನಾಯಕರು ಫೈವ್‌ಸ್ಟಾರ್ ಹೋಟೆಲ್ ಬಗ್ಗೆ ತಿಳಿಸಿದರು. ಇದು ಕೇವಲ

ಬೆಂಗಳೂರಿಗಷ್ಟೇ ಸೀಮಿತವಾದ ಕಾನೂನಲ್ಲ. ಕರ್ನಾಟಕದ ಎಲ್ಲಾ ನಗರ ಪ್ರದೇಶಗಳಿಗೆ ಅನ್ವಯಿಸುವ ಕಾನೂನು. ಇವತ್ತು ಭಾರತದಲ್ಲಿರುವ ಇತರ ನಗರಗಳಿಗೆ ಕಂಪೇರ್ ಮಾಡಿದರೆ, ಮದ್ರಾಸ್, ಕಲ್ಕತ್ತಾ, ಬಾಂಬೆ ಇರಬಹುದು, ರೇಷಿಯೋ, ಫ್ಲೋರ್ ರೇಷಿಯೋ ಇರುವುದು, ನಮ್ಮಲ್ಲಿ ಅದು ಅತ್ಯಂತ ಕಡಿಮೆ ಇದೆ. ಹೋಟೆಲ್‌ನವರು ಈಗಿರುವ ವ್ಯವಸ್ಥೆಯಲ್ಲಿ ಮತ್ತು ಪ್ರವಾಸಿಗರು ಬರುವವರಿಗೆ ಸ್ಥಳ ಕೊಡುವುದು ಮತ್ತು ವಯೆಬಲ್ ಆಗಿರುವುದು ಬಹಳ ಕಡಿಮೆ ಇರುವುದರಿಂದ, ಅವರಿಗೆ ತಮ್ಮ ಜಾಗದಲ್ಲಿ ಯಾವ ಭೂಮಿಯ ಕಾಯ್ದೆಯನ್ನು ವಯಲೇಟ್ ಮಾಡದೆ ತಮ್ಮ ಕಟ್ಟಡದ ಮೇಲೆ ಕಟ್ಟಿಸಿಕೊಳ್ಳುವುದಕ್ಕೆ ಪರ್ಮಿಷನ್ ಕೊಡುವುದು, ಅವರ ಕಡೆಯಿಂದ ಮಾರ್ಕೆಟ್ ವ್ಯಾಲ್ಯೂ ಕಲೆಕ್ಟ್ ಮಾಡುವ ಉದ್ದೇಶ ಸರ್ಕಾರದ್ದಾಗಿದೆ. ಅಂದರೆ, ಆ ಏರಿಯಾದಲ್ಲಿ ಆ ಭೂಮಿಗೆ ಯಾವ ಮಾರ್ಕೆಟ್ ವ್ಯಾಲ್ಯೂ ಇರುತ್ತದೋ, ಅಷ್ಟನ್ನು ಸಂಪೂರ್ಣವಾಗಿ ತೆಗೆದುಕೊಂಡು ಅವರಿಗೆ ಕೊಡುವ ವ್ಯವಸ್ಥೆ. ಇದರ ಹಿನ್ನೆಲೆಯಲ್ಲಿ ಈಗಾಗಲೇ ಅನ್‌ಆಥರೈಸ್ಡ್ ಕನ್‌ಸ್ಟ್ರಕ್ಷನ್ ಕಟ್ಟಡಗಳನ್ನು ಒಡೆಯುವ ಕಾರ್ಯಕ್ರಮ ನಡೆಸುವ ಸಂದರ್ಭದಲ್ಲಿ ಒಡೆಯಬಾರದೆಂದು ಕೋರ್ಟಿನ ಆದೇಶ ಬಂತು. ಅದರ ಜೊತೆಯಲ್ಲಿ ಕಟ್ಟಡಗಳನ್ನು ಒಡೆಯುವ ಕಾರ್ಯಕ್ರಮ ಮಾಡಿರುವುದರಿಂದ, ಕೇವಲ ಒಂದು ಫ್ಲೋರ್‌ಗೆ ಸೀಮಿತವಾಗಿರುವುದಿಲ್ಲ, ಇನ್ನಿತರೆ ಕಟ್ಟಡಗಳಿಗೆ ಧಕ್ಕೆ ಬಂದು ಹಾಳಾಗುತ್ತದೆನ್ನುವ ದೃಷ್ಟಿಯಿಂದ, ಇದಕ್ಕಿಂತ ಮೊದಲು ಕಾನೂನು ರೀತಿಯಲ್ಲಿ ಇದು ಇರಲಿಲ್ಲ. ಸರ್ಕ್ಯುಲರ್ ಮೂಲಕವಾಗಿ ಈ ಕಾರ್ಯಕ್ರಮವನ್ನು ಮಾಡುತ್ತಿದ್ದರು. ಆದರೆ, ಅದರಿಂದ ಸರ್ಕಾರಕ್ಕೆ, ಪಟ್ಟಣ ಪ್ರದೇಶಗಳಿಗೆ ಆದಾಯ ಬರುತ್ತಿರಲಿಲ್ಲ. ಕಟ್ಟಡ ಕಟ್ಟಿದವರ ಬಗ್ಗೆ ಈಗಾಗಲೇ ಕಾರ್ಯಕ್ರಮ ಹಾಕಿಕೊಳ್ಳುತ್ತಿದ್ದು, ನಾವೇನೂ ಮಾಡುವ ಸ್ಥಿತಿಯಲ್ಲಿಲ್ಲ. ಅದನ್ನು ಒಡೆಯುವ ಸ್ಥಿತಿಯಲ್ಲಿಲ್ಲ. ಆದ್ದರಿಂದ ಆದಾಯವೂ ಇಲ್ಲ. ಇದರಿಂದ ನಮಗೆ ಉತ್ತಮ ಆದಾಯ ಬರುತ್ತದೆ, ಬಂದಿರುವ ಆದಾಯವನ್ನು ಕುಡಿಯುವ ನೀರಿಗೆ, ರಿಂಗ್‌ರೋಡ್‌ಗೆ, ಮತ್ತಿತರ ಡೆವಲಪ್‌ಮೆಂಟ್ ಕಾರ್ಯಕ್ರಮಗಳಿಗೆ ಉಪಯೋಗ ಮಾಡುವ ಸನ್ನಿವೇಶದಲ್ಲಿ ಇದನ್ನು ಹೊಸದಾಗಿ ತರುವ ಕಾರ್ಯಕ್ರಮವಲ್ಲ. ಈಗಿರುವ ಸರ್ಕ್ಯುಲರ್‌ಗೆ ಕಾನೂನಿನ ವ್ಯಾಪ್ತಿ ಕೊಡುವ ಪ್ರಯತ್ನವನ್ನಿಲ್ಲಿ ಮಾಡಿದ್ದೇವೆ. ಅದಕ್ಕೆ ಸದನ ಒಪ್ಪಬೇಕೆಂದು ತಮ್ಮ ಮೂಲಕ ಕೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ, ಕೆಲವೊಂದು ನಗರಗಳ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ಪರ್ಮಿಷನ್ ತೆಗೆದುಕೊಂಡ ಮೇಲೆ, ಡೀವಿಯೇಟ್ ಆಗಿರುವುದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯ. ಡೀವಿಯೇಷನ್ ಆಗಿರುವ ಜಾಗದಲ್ಲಿ ನಾವು ಅದನ್ನು ಒಡೆಯುವುದರಿಂದ ಡಿಸ್‌ಮ್ಯಾಂಟಲ್ ಮಾಡುವುದರಿಂದ, ಯಾರಿಗೂ ಅನುಕೂಲವಾಗುವುದಿಲ್ಲವೆನ್ನುವ ದೃಷ್ಟಿಯಿಂದ ಅವರಿಗೆ ಫೆನಾಲ್ಟಿ ಹಾಕುವ ರೀತಿಯಲ್ಲಿ ಅಂದರೆ ಅವರು 25 ಪರ್ಸೆಂಟ್‌ವರೆಗೂ ಸಹ ಇವತ್ತಿರುವ ಸರ್ಕ್ಯುಲರ್‌ನಲ್ಲೇ ಈ ವ್ಯಾಪ್ತಿ ಇದೆ ಅಂದರೆ ಪ್ರತಿಶತ ನೂರರಷ್ಟು ಒಂದು ವೇಳೆ ಎಂಜಿ ರೋಡ್‌ನಲ್ಲಿ ಒಂದು ಕಾರ್ಯಕ್ರಮವಾಗಿತ್ತೆಂದರೆ, ಅದು ಎಷ್ಟು ಬೆಳೆಬಾಳುತ್ತದೆಯೋ ಅದರಷ್ಟೇ ಮೊತ್ತವನ್ನು ಕಲೆಕ್ಟ್ ಮಾಡುವುದು. ಅದಕ್ಕಿಂತ ಜಾಸ್ತಿಯಾದರೆ ಎರಡರಷ್ಟು ಕಲೆಕ್ಟ್ ಮಾಡುವುದು. ಎರಡು ಸಾವಿರ ಪರ್ ಸ್ಕ್ವೇರ್ ಮೀಟರ್ ಇದ್ದರೆ 4 ಸಾವಿರ ರೂಪಾಯಿ ತೆಗೆದುಕೊಳ್ಳುವುದು. ಆ ರೀತಿಯಾಗಿ ಅದನ್ನು ತೆಗೆದುಕೊಳ್ಳುವುದರಿಂದ, ಅಕ್ರಮವಾಗಿ ಡೀವಿಯೇಷನ್ ಮಾಡಿ ಕಟ್ಟಿರುವ ಕಟ್ಟಡಗಳನ್ನು

ಸಕ್ರಮಗೊಳಿಸುವುದರಿಂದ ನಮ್ಮ ನಗರಕ್ಕೆ ಆದಾಯ ಬರುತ್ತದೆನ್ನುವ ದೃಷ್ಟಿಯಿಂದ ಮಾಡಲಾಗಿದೆ. ಈಗಾಗಲೇ ಕಾನೂನಿನಲ್ಲಿ ಸರ್ಕ್ಯೂಲರ್ ಮುಖಾಂತರ ಇರುವುದನ್ನು ಕಾನೂನಿನಲ್ಲಿ ಪ್ರೊಟೆಕ್ಷನ್ ಕೊಡುವ ತೀರ್ಮಾನವನ್ನು ಈ ತಿದ್ದುಪಡಿ ಮೂಲಕ ತರುತ್ತಿದ್ದೇವೆ. ಅದರ ಜೊತೆಯಲ್ಲಿ, ಈಗಾಗಲೇ ನಗರ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರಕ್ಕೆ ಸೆಸ್ ಸಂಗ್ರಹಿಸುವುದಕ್ಕೆ ಅಧಿಕಾರವಿದೆ. ನೀರಿನ, ಸ್ಲಂ ಡೆವಲಪ್‌ಮೆಂಟ್, ಎಜುಕೇಷನ್ ಇನ್ನಿತರವುಗಳಿಗೆ ಕಲೆಕ್ಟ್ ಮಾಡುವುದರ ಜೊತೆಗೆ ಪ್ರೈವೇಟ್‌ನಲ್ಲಿ ಬಿಲ್ಡರ್ಸ್ ಇಂಥದ್ದರಲ್ಲಿ, ಫ್ಲೈ-ಓವರ್, ರಿಂಗ್‌ರೋಡ್ ಮಾಡುವವರು, ಇನ್ನಿತರ ಯಾವುದೇ ಬ್ರಿಡ್ಜ್‌ಸ್ ಕಟ್ಟುವವರೂ ಸಹ ಕಲೆಕ್ಟ್ ಮಾಡುವ ಅಧಿಕಾರ ಕೊಡುವಂಥ ತಿದ್ದುಪಡಿ. 3-4 ತಿದ್ದುಪಡಿಗಳನ್ನು ಇದರ ಮುಖಾಂತರ ತಂದು, ಸರ್ಕ್ಯೂಲರ್ ಮುಖಾಂತರ ನಾವೇನು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೇವೆ, ಅದಕ್ಕೆ ಕಾನೂನಿನ ವ್ಯವಸ್ಥೆ ಮಾಡಬೇಕೆಂಬುದಕ್ಕೆ ಇದನ್ನು ತಂದಿದ್ದೇವೆ. ಆದ್ದರಿಂದ, ನಾನು ತಮ್ಮ ಮುಖಾಂತರ ಎಲ್ಲಾ ಸದಸ್ಯರಲ್ಲೂ, ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಮಾನ್ಯ ಮಂತ್ರಿಗಳು ಈ ವಿಧೇಯಕ ಬಹಳ ಸರಳವಾಗಿದೆ ಎಂದು ಹೇಳಿದ್ದಾರೆ, ಆದರೆ, ಇದನ್ನು ನಾವು ಓದಿ ನೋಡಿದಾಗ ಅದೆಷ್ಟು ಸರಳವಿದೆ ಮತ್ತು ಇದರ ಕಾಂಪ್ಲಿಕೇಷನ್ಸ್ ಏನು ಯಾವ ರೀತಿಯಾಗಿ ಸರ್ಕಾರ ಸಂಪೂರ್ಣವಾದ ಹಕ್ಕನ್ನು ಅಥಾರಿಟಿಯನ್ನು ತನ್ನ ಕೈಯಲ್ಲಿಟ್ಟುಕೊಂಡಿದೆ ಎನ್ನುವುದನ್ನು ಕೆಲವು ಮಾತುಗಳಲ್ಲಿ ಹೇಳುತ್ತೇನೆ. ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ ಅಂಡ್ ರೀಸನ್ಸ್‌ನ್ನು ತಾವು ನೋಡಿದಾಗ, 1-2ನೆಯದು ಅಂಥ ಮಹತ್ವವಲ್ಲ. ನೋಟಿಫೈಡ್ ಏರಿಯಾ ಕಮಿಟಿ ತೆಗೆದು, ಮುನಿಸಿಪಾಲಿಟಿ ಆಕ್ಟ್ ಪ್ರಕಾರ ಅದನ್ನು ಮುನಿಸಿಪಾಲಿಟಿಗೆಂದು ಮಾಡಿದ್ದೀರಿ. ಆಮೇಲೆ ಮಂಡಲ ಪಂಚಾಯತಿ ತೆಗೆದು ಗ್ರಾಮ ಪಂಚಾಯಿತಿ ಎಂದು ಮಾಡಿದ್ದೀರಿ. ಅದು ಆಕ್ಟ್ ಪ್ರಕಾರ ಕಾನ್ಸಿಕ್ವೆನಿಷಿಯಲ್ ಅಮೆಂಡ್‌ಮೆಂಟ್. ಆದರೆ 3ನೆಯದು 'To empower the state Government to exempt any Board, Authority or Body constituted by or under any law and owned or controlled by the State Government from payment of fee for obtaining permission for change of land use or development of land.'

ಯಾವುದೇ ಅಥಾರಿಟಿ. ಬೋರ್ಡಿಗೆ ಸರ್ಕಾರದವರು ಎಗ್ಸೆಂಫ್ಟ್ ಮಾಡುವ ಹಕ್ಕನ್ನು ಇಟ್ಟುಕೊಂಡಿದೆ. ಅದರಿಂದೇನಾಗುತ್ತದೆಂದರೆ, ನಿಮಗೆ ಖುಷಿ ಬಂದ ಹಾಗೆ, ಯಾವಾಗ ಎಗ್ಸೆಂಫ್ಟ್ ಮಾಡಬೇಕೋ, ಆಗ ಮಾಡುವುದು, ಯಾರಿಗಾದರೂ ಪನಿಷ್ ಮಾಡಬೇಕಾದರೆ, ಬೋರ್ಡ್, ಕಾರ್ಪೋರೇಷನ್, ಅಥಾರಿಟಿ ಮೇಲೆ ಸಿಟ್ಟಿದ್ದರೆ, ಅವರಿಗೆ ಹಣ ತೆಗೆದುಕೊಂಡು ಪರ್ಮಿಷನ್ ಕೊಡುವುದು. ಸರ್ಕಾರದಲ್ಲಿ ಡಿಸ್ಕ್ರಿಷನ್ ಇದ್ದರೆ ಅದು ಮಿಸ್‌ಯೂಸ್ ಮಾಡಿಕೊಳ್ಳುವುದನ್ನು ಮತ್ತು ಜ್ಯುಡಿಷಿಯಸ್ಲಿ ಉಪಯೋಗ ಮಾಡಿಕೊಳ್ಳದಿರುವುದನ್ನು ನಾವು ನೋಡಿದ್ದೇವೆ. ಜ್ಯುಡಿಷಿಯಸ್ಲಿ ಅಪ್ಲೈ ಮಾಡಿದ್ದರೆ, ಜ್ಯುಡಿಷಿಯಸ್ಲಿ ಈ ಕಾರ್ಯವನ್ನು ನಿರ್ವಹಿಸಿದ್ದರೆ ಸರಿ ಎಂದು ಹೇಳಬಹುದು. ಈಗಾಗಲೇ ಸಣ್ಣಪುಟ್ಟ ಕೆಲಸಕ್ಕೆ ಅನೇಕ ಸಾರಿ ನಿಮ್ಮ ಡಿಸ್ಕ್ರಿಷನ್‌ನಲ್ಲಿರುವುದನ್ನೇ ನೀವು ಮಾಡುವ ಹಾಗಿಲ್ಲ ಪಾರ್ಟಿ, ಜನರ,

ಗುಂಪಿನಾಧಾರದ ಮೇಲೆ, ಪ್ರಿಜ್ಯುಡಿಸಸ್ ಮೇಲೂ, ಒಂದು ಕಂಪನಿ ನಿಮಗೆ ಬೇಕಾಗಿದ್ದು, ಇನ್ನೊಂದು ಬೇಡವಾದ್ದು, ಬೋರ್ಡ್ ಬೇಕಾಗಿದ್ದು, ಆಗ ಮಿಸ್‌ಯೂಸ್ ಆಗುವ ಸಾಧ್ಯತೆ ಇದೆ. ಎಗ್ಜೆಂಪ್ಟ್ ಮಾಡುವ ಹಕ್ಕೇನು ಇದೆ, ಅದು ಅಷ್ಟೊಂದು ಸಮಂಜಸವಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಪ್ಲಾನಿಂಗ್ ಅಥಾರಿಟಿಗೆ ಪರ್ಮಿಟ್ ಮಾಡುವುದಕ್ಕೆ ಎಂಪವರ್ ಮಾಡಿಕೊಂಡಿದ್ದೀರಿ:

To empower the Planning Authority to permit:

(i) additional Floor Area Ratio upto 100 percent for the land handed over free of cost whenever such lands are required for road widening purposes or for formation of new roads.

(ii) additional floor Area Ratio upto 100 per cent in case of Starred Hotels subject to payment of a minimum of fifty per cent and a maximum of 100 per cent of the market value of land equivalent to the Floor Area Ratio permitted..

ಈಗಾಗಲೇ ಎಷ್ಟೋ ಬಿಲ್ಡಿಂಗ್‌ಗಳು ಕನ್‌ಸ್ಟ್ರಕ್ಷನ್ ಆಗಿವೆ, ಕನ್‌ಸ್ಟ್ರಕ್ಷನ್ ಮಾಡುವ ಮುನ್ನ, ಆ ಬಿಲ್ಡಿಂಗ್ ಫೌಂಡೇಷನ್ ಆಗಲಿ ಅಥವಾ ಆ ಬಿಲ್ಡಿಂಗ್ ಎಷ್ಟು ಭಾರವನ್ನು ಹೊರಬಹುದು ಅಥವಾ ಇದರ ಯುಟಿಲಿಟಿ ಎಷ್ಟು ಮಾಡಿಕೊಳ್ಳಬಹುದೆಂಬ ದೃಷ್ಟಿಯಿಂದ ಒಂದು ಸ್ಟ್ರಕ್ಚರಲ್ ಡಿಸೈನ್ ಮಾಡಿರುತ್ತಾರೆ. ಹಣದ ಆಸೆಗಾಗಿ ಅಥವಾ ಬಾಡಿಗೆ ಜಾಸ್ತಿ ಬರುತ್ತದೆ ಎಂಬ ಉದ್ದೇಶದಿಂದ, ಇದಕ್ಕೆ ಸರ್ಕಾರ ಹೇಗಿದ್ದರೂ ಪರ್ಮಿಷನ್ ಕೊಡುತ್ತಾರೆಂದು, ಇನ್ನೊಂದು ಫ್ಲೋರ್ ಏರಿಸುವುದಕ್ಕೆ ಹೋಗುತ್ತಾರೆ, ನಾಳೆ ದಿವಸ ಗಂಗಾರಾಮ್ ಬಿಲ್ಡಿಂಗ್ ರೀತಿಯಲ್ಲಿ ಇವುಗಳು ಬಿದ್ದು, ಸಾವಿರಾರು ಜನ ಸತ್ತು ಹೋಗಬಹುದು. ಯಾರೋ ಒಬ್ಬ ಅರ್ಜಿ ತಂದಾಗ ನೀವು ಬೇರೆಯವರ ಒತ್ತಡಕ್ಕೆ ಮಣಿದು ಸ್ಯಾಂಕ್ಷನ್ ಮಾಡುತ್ತೀರಿ.

ಶ್ರೀ ಬಿ.ಎಸ್.ಬಚ್ಚೇಗೌಡ (ಸಾರಿಗೆ ಸಚಿವರು) : ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ವೀರಪ್ಪಮೊಯಿಲಿಯವರಿಗೆ ಈ ವಿಷಯ ಗೊತ್ತಿದೆ. ಮಂಗಳೂರು, ಬೆಂಗಳೂರಿನಲ್ಲಿ ಕೆಲವು ಸ್ಥಳಗಳಾದ ಕಮರ್ಷಿಯಲ್ ಸ್ಟ್ರೀಟ್ ರೋಡ್ ಅಥವಾ ಮಹಾತ್ಮ ಗಾಂಧಿ ರೋಡ್ ಹೀಗೆ ಅನೇಕ ಕಾಸ್ಟ್ಲಿ ಏರಿಯಾದಲ್ಲಿ ಅವರಿಗೆ ಮೇಲಕ್ಕೆ ಹೈ ರೈಸ್ ಬಿಲ್ಡಿಂಗ್ ಮಾಡಿಕೊಟ್ಟರೆ ಅವರೇ ಸೆಟ್‌ಬ್ಯಾಕ್ ಹಾಕಿಕೊಂಡು ನಮಗೆ ರಸ್ತೆ ಮಾಡಿ ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತಾರೆ. ಇದಕ್ಕೆ ಬೆಲೆ ಜಾಸ್ತಿ ತರಬೇಕಾಗುತ್ತದೆ ಎಂದು ಇಂಥ ಬಿಲ್ಡಿಂಗ್ಸ್‌ಗೆ ಎಫ್.ಎ.ಆರ್. ಜಾಸ್ತಿ ಕೊಡತಕ್ಕಂಥದ್ದು 1.25, 1.5 ಇರುವ ಕಡೆ ಹೆಚ್ಚಿಗೆ ಕೊಡುವಂಥದ್ದು, ಅವರು ಮುಫತ್ತಾಗಿ ಇದನ್ನು ಬಿಟ್ಟು ಕೊಡಬೇಕೆಂದು, ನಾವು ಅಲ್ಲಿಗೆ ಹೋದಾಗ ಅನೇಕ ಕಡೆ ಈ ರೀತಿಯ ಸಲಹೆಗಳನ್ನು ಕೊಟ್ಟರು That is there and to encourage formation of five star hotels,

ಶ್ರೀ ಮಲ್ಲಿಕಾರ್ಜುನ ಖರ್ಗೆ : ರೋಡ್ ವೈಡ್‌ನಿಂಗ್‌ಗೋಸ್ಕರ ಒಂದು ಫ್ಲೋರ್ ಹೆಚ್ಚಿಗೆ ಅಲೋ ಮಾಡುತ್ತೇವೆ ಎಂದರೆ, ಇದಕ್ಕೆ ಸ್ಟ್ರಕ್ಚರ್ ಡಿಸೈನ್ ಮಾಡಿರುವಂತೆಯೇ ಕನ್‌ಸ್ಟ್ರಕ್ಷನ್ ಆಗುತ್ತದೆ

ಎಂದರೆ ಪರವಾಗಿಲ್ಲ. ಆದರೆ ಎಗ್ಸಿಸ್ಟಿಂಗ್ ಫ್ಲೋರ್‌ಗೆ ನೀವು ಅಲೋ ಮಾಡಿದರೆ ಅದು ಕೊಲ್ಯಾಪ್ಸ್ ಆಗುತ್ತದೆಂದು ಹೇಳುತ್ತಿದ್ದೇನೆ. ಈಗಾಗಲೇ ಕಟ್ಟಡ ಕಟ್ಟಿರುವುದರ ಮೇಲೆ, ರೋಡ್ ನಮಗೆ ಸಿಗುತ್ತದೆಂದು, ನಾಲ್ಕನೇ ಫ್ಲೋರ್ ಇರುವ ಕಡೆ ಐದು ಅಥವಾ ಆರು ಫ್ಲೋರ್ ಕಟ್ಟುವುದಕ್ಕೆ ಪರ್ಮಿಷನ್ ಕೊಟ್ಟರೆ ಹೇಗೆ? ಇದರಲ್ಲಿ ಕ್ಲಿಯರ್ ಆಗಿ ಇದೆ, ತಾವು ಸ್ವಲ್ಪ ನೋಡಿ. ಈ ಖಾತೆಯನ್ನು ಬಿಟ್ಟು 8 ದಿವಸ ಆಗಿದೆ. ಆದ್ದರಿಂದ ತಾವು ಮರೆತು ಹೋಗಿದ್ದೀರಿ. ಈ ಬಿಲ್ ನಿಮ್ಮ ಹೆಸರಿನಲ್ಲಿಯೇ ಇದೆ.

Additional Floor Area Ratio upto 100 per cent for the land handed over free of cost whenever such lands are required for road widening purposes or for formation of new roads.

Additional Floor Area Ration upto 100 Per cent in case of Starred hotels subject to payment of a minimum of fifty per cent and a maximum of 100 percent of the market value of land equivalent to the Floor Area Ratio if so permitted,

ಈಗಾಗಲೇ ಇರತಕ್ಕಂಥದ್ದಕ್ಕೆ ಪರ್ಮಿಷನ್ ಕೊಡುವುದಕ್ಕೆ ಇಲ್ಲಿ ಅವಕಾಶ ಇದೆ. ಏಕೆಂದರೆ, ನಿಮಗೆ ರೋಡ್ ಮಾಡುವುದಕ್ಕೆ ಜಾಗ ಕೊಟ್ಟರೆ ಮೇಲೊಂದು ಫ್ಲೋರ್ ಕಟ್ಟಿಸಿಕೊಳ್ಳಿ ಎಂದು ನೀವು ಹೇಳಬಹುದು. ಈ ಕಟ್ಟಡಗಳು ನಿಲ್ಲುತ್ತವೆಯೋ, ಇಲ್ಲವೋ ಎಂಬುದನ್ನು ಕೂಲಂಕಷವಾಗಿ ವಿಚಾರ ಮಾಡಿ, ಇಂಜಿನಿಯರ್ ಅಥವಾ ಎಕ್ಸ್‌ಪರ್ಟ್‌ಗಳು ಪರ್ಮಿಷನ್ ಕೊಡುತ್ತಾರೆಂದು ಮತ್ತೆ ನೀವು ಹೇಳಬಹುದು. ಆದರೆ, ಅನೇಕಸಾರಿ ತರಾತುರಿಯಲ್ಲಿ ಸಾಕಷ್ಟು ಜನ ಪರ್ಮಿಷನ್ ತೆಗೆದುಕೊಂಡು ರಾತ್ರೋರಾತ್ರಿ ಬಿಲ್ಡಿಂಗ್‌ಗಳನ್ನು ಕಟ್ಟುತ್ತಿರುವುದು ತಮಗೂ ಗೊತ್ತಿದೆ. ಇವತ್ತಿನದಿವಸ ದೊಡ್ಡ ದೊಡ್ಡ ಏರಿಯಾಗಳಲ್ಲಿ ಏನಾಗಿದೆ ಎಂದರೆ ಮೊದಲು ಎರಡು ಫ್ಲೋರ್‌ಗೆ ಪರ್ಮಿಷನ್ ತೆಗೆದುಕೊಂಡು ನಂತರ ರೆಗ್ಯುಲರೈಸ್ ಮಾಡಿಕೊಳ್ಳೋಣವೆಂದು ನಾಲ್ಕನೇ ಫ್ಲೋರ್‌ವರಗೆ ಕಟ್ಟಡವನ್ನು ಕಟ್ಟಿರುತ್ತಾರೆ. ಕಟ್ಟಡ ಕಟ್ಟುವುದಕ್ಕೆ ಮಾಡಿಸಿರುವಂಥ ಡಿಸೈನ್, ಕಾರ್ಪೊರೇಷನ್‌ನಲ್ಲಿ, ಪರ್ಮಿಷನ್ ತೆಗೆದುಕೊಳ್ಳುವುದಕ್ಕೆ ಒಂದು ರೀತಿ ಇರುತ್ತದೆ ಮತ್ತು ಕನ್‌ಸ್ಟ್ರಕ್ಷನ್ ಒಂದು ರೀತಿಯಲ್ಲಿರುವುದು ತಮಗೆಲ್ಲಾ ಗೊತ್ತಿರುವ ವಿಚಾರ. ಇದರಿಂದ ಏನಾಗುತ್ತದೆ ಎಂದರೆ, ಎಗ್ಜಿಸ್ಟಿಂಗ್ ಬಿಲ್ಡಿಂಗ್‌ಗೆ ಮತ್ತೊಂದು ಫ್ಲೋರ್ ಏರಿಸುವುದಕ್ಕೆ ಅವಕಾಶ ಮಾಡಿ ಕೊಟ್ಟರೆ, ಇಂಥ ಬಿಲ್ಡಿಂಗ್‌ಗಳ ಯುಟಿಲಿಟಿ, ಲೈಫ್ ಮತ್ತು ಸ್ಟ್ರಕ್ಚರಲ್ ಡಿಸೈನ್, ಇವೆಲ್ಲವೂ ಬಹಳ ಪ್ರಾಮುಖ್ಯವಾಗಿರುವುದರಿಂದ ಸಾರಸಗಟಾಗಿ ಇದಕ್ಕೆ ಪವರ್ ತೆಗೆದುಕೊಂಡು ನಾಳೆದಿವಸ ಇದನ್ನು ಯಾರೋ ಒಬ್ಬ ಅಧಿಕಾರಿಗೆ ಎಂಪವರ್ ಮಾಡುತ್ತೀರಿ. ಆ ಅಧಿಕಾರಿ ಇದನ್ನು ಮಿಸ್‌ಯೂಸ್ ಮಾಡತಕ್ಕಂಥ ಎಲ್ಲಾ ಸಾಧ್ಯತೆಗಳಿವೆ. ಈಗಾಗಲೇ ನಾವು ನೋಡಿರುವ ಹಾಗೆ ಎಷ್ಟೋ ಟೌನ್ ಪ್ಲಾನಿಂಗ್ ಇದ್ದರೂ ಕೂಡ ಪ್ಲಾನಿಂಗ್ ಅಥಾರಿಟಿ ಪ್ರಕಾರ ಕೆಲಸ ಆಗುವುದಿಲ್ಲ. 8 ಫೀಟ್ ಬಿಡಬೇಕೆಂದು ಹೇಳಿದರೂ ಕೂಡ 4 ಫೀಟ್ ಸಹ ಬಿಡುವುದಿಲ್ಲ, ಇದು ಎಲ್ಲರ ಅನುಭವದ ಮಾತು. ಇದರಿಂದ ಸಾಕಷ್ಟು ತೊಂದರೆ ಆಗುತ್ತದೆ. ಆದ್ದರಿಂದ ಇದನ್ನು ದಯವಿಟ್ಟು ಕೈಬಿಡಬೇಕು. ತಾವು ಒಪ್ಪುವುದಾದರೆ ನನ್ನದೊಂದು ಸಲಹೆ ಇದೆ. ಏನೆಂದರೆ, ಇದನ್ನು ಜಂಟಿ ಸದನ ಸಮಿತಿಗೆ ರೆಫರ್

ಮಾಡಿ ಇದರ ಬಗ್ಗೆ ಕೂಲಂಕಷನಾಗಿ ಚರ್ಚೆ ಮಾಡಿ ಇದರ ಸಾಧಕ ಬಾಧಕಗಳನ್ನು ತಿಳಿದುಕೊಂಡು ಈ ಬಿಲ್‌ನ್ನು ಪಾಸ್‌ಮಾಡೋಣ. ಒಂದು ವೇಳೆ ಇದನ್ನು ಬ್ಲಾಂಕೆಟ್ ಆಗಿ ಪಾಸ್ ಮಾಡುವುದಕ್ಕೆ ಪರ್ಮಿಷನ್ ಕೊಟ್ಟರೆ ಖಂಡಿತವಾಗಿ ಇದರ ದುರುಪಯೋಗವನ್ನು ಪ್ಲಾನಿಂಗ್ ಅಥಾರಿಟಿ ಅಥವಾ ಕಾರ್ಪೊರೇಷನ್ ಬಿ.ಡಿ.ಎ. ಅಥವಾ ಸಿಟಿ ಮುನಿಸಿಪಾಲಿಟಿಯ ಅಧಿಕಾರಿಗಳು ಮಾಡಿಕೊಳ್ಳುತ್ತಾರೆ. ಇದಕ್ಕಾಗಿ ನನ್ನ ಸಲಹೆ ಏನೆಂದರೆ, ಇದನ್ನು ತಾವು ಜಂಟಿ ಸದನ ಸಮಿತಿಗೆ ರೆಫರ್ ಮಾಡಿ, ಇಲ್ಲದಿದ್ದರೆ ತೊಂದರೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

Buildings constructed in deviation of sanctioned plan subject to such limits and payment of such penalty of not less than the market value of such deviated areas as may be prescribed.

ಎಷ್ಟು ಡೀವಿಯೇಷನ್ ಮಾಡಿದ್ದಾರೆಂದು ಅಥವಾ ಎಷ್ಟು ಒತ್ತುವರಿ ಮಾಡಿರುವ ಬಗ್ಗೆ ನೀವು ಒಪ್ಪಿಕೊಳ್ಳುತ್ತೀರಿ? ಇದೆಲ್ಲವೂ ಕೂಡ ನಮಗೆ ಸ್ವಲ್ಪ ಗೊತ್ತಾಗಬೇಕು.

ಶ್ರೀ ಬಿ.ಎಸ್.ಬಚ್ಚೇಗೌಡ : 25 ಅಥವಾ 30ಪರ್ಸೆಂಟ್ ಡೀವಿಯೇಷನ್ ಅಗಿರುವುದು ರೂಲ್ಸ್‌ನಲ್ಲಿ ಇನ್‌ಕಾರ್ಪೊರೇಟ್ ಆಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ಒಬ್ಬ ಡೀವಿಯೇಟ್ ಮಾಡಿಕೊಂಡು ಏನು ಮಾಡುತ್ತಾನೆಂದರೆ, 8 ಅಥವಾ 10 ಫೀಟ್ ಇದ್ದಲ್ಲಿ 8 ಫೀಟ್ ಒತ್ತುವರಿ ಮಾಡಿರುತ್ತಾನೆ.how are you going to regularise? ಇದಕ್ಕಾಗಿ ನಾನು ಹೇಳುವುದೇನೆಂದರೆ, ಇವೆಲ್ಲವನ್ನೂ ಕೂಡ ಜಂಟಿ ಸದನದ ಸಮಿತಿಗೆ ವಹಿಸಿ, ಆ ಸಮಿತಿ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತದೆ. ಆದ್ದರಿಂದ ದಯವಿಟ್ಟು ಇದನ್ನು ರೆಫರ್ ಮಾಡಿ. 1992ರಿಂದ ರೆಟ್ರಾಸ್‌ಪೆಕ್ಟಿವ್ ಎಫೆಕ್ಟ್‌ನಿಂದ ತಾವು ಫೀ ಕಲೆಕ್ಟ್ ಮಾಡುತ್ತಿದ್ದೀರಿ.

'To provide for levy and collection of surcharge or cess with effect from 19-10-1992 for granting permission for development of land or building from the owner of such land or building, for supply of water, formation of ring road, slum improvement and mass rapid transport system at such rate not exceeding one tenth of the market value...

ಇದರಲ್ಲಿ ಅನೇಕ ವಿಷಯಗಳು ಅಡಗಿವೆ. 1992 ರಿಂದ ಇಲ್ಲಿಯವರೆಗೆ ತಾವು ಕಲೆಕ್ಟ್ ಮಾಡುತ್ತಿದ್ದೇವೆ ಎನ್ನತಕ್ಕಂಥ ಮಾತನ್ನು ಸಹ ಹೇಳಿದ್ದೀರಿ ಮತ್ತು ಕೊನೆಗಳಿಗೆಯಲ್ಲಿ ಏನು ಪ್ರಾವಿಜನ್ ಮಾಡಿಕೊಂಡಿದ್ದೀರಿ ಎಂದರೆ, ಕೆಲವು ಬಿಲ್ಡಿಂಗ್‌ಗಳನ್ನು ಫೋರ್‌ಫೀಟ್ ಮಾಡತಕ್ಕಂಥ ಅಥಾರಿಟಿ ತಾವು ತೆಗೆದುಕೊಂಡಿದ್ದೀರಿ, ಮತ್ತು ಯಾವುದೇ ಒಂದು ಬಿಲ್ಡಿಂಗ್ ಡೀವಿಯೇಟ್ ಆದರೆ, ಅದು ಮುನಿಸಿಪಾಲಿಟಿ ಅಥವಾ ಕಾರ್ಪೊರೇಷನ್‌ರವರಿಗೆ ಸಂಬಂಧಪಟ್ಟರೆ ಆ ಜಾಗವನ್ನು ಫೋರ್‌ಫೀಟ್ ಮಾಡುವುದಕ್ಕೆ ಕೂಡ ತಾವು ಮಾಡಿದ್ದೀರಿ.

ರೆಗ್ಯುಲರೈಸ್ ಕ್ಲಾಸ್ ಫೆನಾಲ್ಟಿ ಕ್ಲಾಸ್ ಇದ್ದರೂ ಒಂದು ಕಡೆ ಫೋರ್‌ಫೀಟ್ ಕ್ಲಾಸ್‌ನ್ನು ಕೂಡ

ಇಟ್ಟುಕೊಂಡಿದ್ದೀರಿ. ಇವತ್ತಿನದಿವಸ ಫೋರ್‌ಫೀಟ್ ಮಾಡಿಕೊಳ್ಳುವಾಗ ಅವರಿಗೆ ಪರಿಹಾರಧನ ಕೊಡಬೇಕಾಗುತ್ತದೆ. ಇವರಿಗೆ ಪರಿಹಾರಧನವನ್ನು ಕೊಡಬೇಕಾಗಿರುವುದರಿಂದ ನಿಮ್ಮ ಫೈನಾನ್ಸಿಯಲ್ ಮೆಮೊರಂಡಮ್‌ನಲ್ಲಿ ಎಷ್ಟು ಹಣ ಖರ್ಚಾಗುತ್ತದೆ ಎಂದು ಇದರಲ್ಲಿ ಒಂದು ಪೈಸ್ ಕೂಡ ತೋರಿಸಿಲ್ಲ. ಈ ಬಿಲ್‌ನಲ್ಲಿ ಏನು ಬರೆದಿದ್ದೀರಿ ಎಂದರೆ, there is no extra expenditure involved in this proposed measure...

ಯಾವಾಗ ಇದನ್ನು ಫೋರ್‌ಫೀಟ್ ಮಾಡಿಕೊಂಡ ಮೇಲೆ ಅಥವಾ ಪ್ರಾಪರ್ಟಿ ತೆಗೆದುಕೊಂಡ ಮೇಲೆ, ನಾಳೆ ದಿವಸ ಆತನು ಕೋರ್ಟ್‌ಗೆ ಹೋಗಿ ಪರಿಹಾರಧನವನ್ನು ಕೊಡಬೇಕೆಂದು ಕೇಳಿದಾಗ, ಇದಕ್ಕಾಗಿ ನಿಮ್ಮ ಫೈನಾನ್ಸಿಯಲ್ ಮೆಮೊರಂಡಮ್‌ನಲ್ಲಿ ಎಷ್ಟು ಹಣ ಬೇಕಾಗುತ್ತದೆಂದು ಸ್ಪಷ್ಟವಾಗಿ ನೀವು ಹೇಳಲಿಲ್ಲ. ಇದೊಂದು ಮೇಜರ್ ಡಿಫೆಕ್ಟ್ ಆಗಿದೆ. ನಾನು ಈಗಾಗಲೇ ಹೇಳಿರುವಂಥ ಎಲ್ಲಾ ತೊಂದರೆಗಳು ಇದರಲ್ಲಿರುವುದರಿಂದ, ತಾವು ಇದನ್ನು ದಯವಿಟ್ಟು ಜಂಟಿ ಸದನ ಸಮಿತಿಗೆ ಅಥವಾ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿ ಇದನ್ನು ಪಾಸ್ ಮಾಡಿಕೊಳ್ಳಿ ಎನ್ನುತಕ್ಕಂಥ ನನ್ನ ಸಲಹೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

4.20 ಪಿ.ಎಂ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಭಾಧ್ಯಕ್ಷರೇ, ಇವತ್ತು ಏನು ಒಂದು ವಿಧೇಯಕವನ್ನು ನಮ್ಮ ಮುಂದೆ ಇಟ್ಟಿದ್ದಾರೆ, ಅದನ್ನು ಬಹಳ ಬುದ್ಧಿವಂತಿಕೆಯಿಂದ ಇಟ್ಟಿದ್ದಾರೆ. ಮೂರು ಸತ್ಯವನ್ನು ಐದು ಸುಳ್ಳಿನ ಜೊತೆಗೆ ಸೇರಿಸಿ ಒಂದು ಬ್ಯೂಟಿಫುಲ್ ಪ್ಯಾಕೇಜ್ ಇಟ್ಟಿದ್ದಾರೆ. ಮೊದಲು ಹೇಳುವುದು ಏನು? ಅದು ರಸ್ತೆಗೆ ಬೇಕು, ಆ ರಸ್ತೆಗೆ ಎಷ್ಟು ಜಾಗ ಬೇಕು ಅಷ್ಟನ್ನು ತೆಗೆದುಕೊಂಡು ಅವರಿಗೆ ಇನ್ನೊಂದು ಫ್ಲೋರ್ ಕಟ್ಟುವುದಕ್ಕೆ ಬಿಡುತ್ತೇವೆಂದು. ಅದನ್ನು ನಮಗೆ ತೋರಿಸುವುದಕ್ಕೆ ಮಾತ್ರ. ಅದರಿಂದ ನಿಜವಾಗಲೂ ಆಗುವ ಅನಾಹುತ ಎಲ್ಲರಿಗೂ ಕೂಡ ಗೊತ್ತಿದೆ.

SRI B.N. BACHHE GOWDA :You should appreciate this as a city MLA in the interest of cities.

SRI S. SURESH KUMAR : I am going to do that.

ನಾನು ಹೇಳುತ್ತೇನೆ. ಆಯಿತು, ನಾನು ಹೇಳಿದ ಮೇಲೆ ನೀವು ನನ್ನನ್ನು ಅಪ್ರೀಷಿಯೇಟ್ ಮಾಡುತ್ತೀರಾ ಓಕೆ, ಕುಳಿತುಕೊಳ್ಳಿ. ಇದೇ ಮೊದಲನೆಯದು, ಆ ರಸ್ತೆಗೋಸ್ಕರ ಎಷ್ಟು ಫ್ಲೋರ್ ಬೇಕು, ನೀವು ಅಷ್ಟನ್ನು ಮಾಡಿ. ಅದರೆ ಮುಂದಿನದು ಇದೆಯಲ್ಲಾ ಅದು ಬಹಳ ಕಥರ್ನಾಕ್ ಚೀಜ್. ಯಾರಿಗೋಸ್ಕರ ಇದನ್ನು ತರುತ್ತಿದ್ದೀರಿ. ಈ ಕಾನೂನನ್ನು ಏನಾದರೂ ನೀವು ತಂದರೆ ಹಣ **ಇರುವವನು ಏನು ಬೇಕಾದರೂ ವೈಲೇಷನ್ ಮಾಡಬಹುದು. ಹಣ ಇಲ್ಲದೇ ಇರುವವನು ವೈಲೇಷನ್** ಮಾಡುವುದಿಲ್ಲ. ಅಥವಾ ವೈಲೇಷನ್ ಮಾಡಬೇಕು ಎನ್ನುವವನು ಒಂದು ಫೈವ್‌ಸ್ಟಾರ್ ಹೋಟೆಲ್ ಕಟ್ಟಬೇಕು. ಫೈವ್‌ಸ್ಟಾರ್ ಹೋಟೇಲ್‌ದವನಿಗೆ ಒಂದು ಫ್ಲೋರ್ ಬೇಕು ಎಂದು ನಿಮ್ಮನ್ನು ಯಾರು ಸ್ವಾಮಿ ಕೇಳಿದ್ದರು.? ಈಗ ಏರಪೋರ್ಟ್ ಹತ್ತಿರ ಫೈವ್‌ಸ್ಟಾರ್ ಹೋಟೆಲ್‌ಗಳು ಬರುತ್ತಿವೆ. ಅದರೊಳಗೆ ಏರಪೋರ್ಟ್ ರೋಡಿನಲ್ಲಿ ಒಂದು ಫೈವ್‌ಸ್ಟಾರ್ ಹೋಟೇಲ್ ಬರುತ್ತಿದೆ. ಆ ಹೋಟೇಲ್‌ನ್ನು

ನಿಮ್ಮ ಮನಸ್ಸಿನಲ್ಲಿಟ್ಟುಕೊಂಡು ತಂದಿದ್ದೀರೆಂಬುದು ಎಲ್ಲರಿಗೂ ಕೂಡ ಗೊತ್ತಿದೆ. ಇರಲಿ ಡೈಮೆಂಡ್ ಡಿಸ್ಟ್ರಿಕ್ಟ್ ಬೇರೆ, ಆದರೆ ನಾನು ಫೈವ್‌ಸ್ಟಾರ್ ಹೋಟೇಲ್ ಬಗ್ಗೆ ಹೇಳುತ್ತಿರುವುದು. ಲೀಲಾ ಕಂಪನಿ ಆ ಹೋಟೇಲ್‌ನ ಒಬ್ಬ ಮನುಷ್ಯನನ್ನು ಇಟ್ಟುಕೊಂಡು ಆ ಒಂದು ಬಿಲ್‌ನ್ನು ತಂದರು. ಒಂದು ಹೋಟೇಲ್‌ಗೋಸ್ಕರ ಒಂದು ಬಿಲ್ಲು. ನೀವು ಈ ರೀತಿಯಾದ ಕಾನೂನನ್ನು ಕೊಟ್ಟರೆ ಆ ಏರ್‌ಪೋರ್ಟ್ ಅಥಾರಿಟಿಯವರು ನಿಮ್ಮನ್ನು ಬಿಡುತ್ತಾರಾ? ಏರ್‌ಪೋರ್ಟ್ ಉಲ್ಲಂಘನೆ ಯಾಗುವುದಿಲ್ಲವೇ? ಅದು ಒಂದು ಕಾನೂನು ಇದೆ ಆ ಕಾನೂನು Airport Authority clearance ಅದನ್ನು ತೆಗೆದುಕೊಂಡು ತಾನೇ ನೀವು ಮಾಡಬೇಕು. ನೀವು ಏನಾದರೂ ಅವರನ್ನು ಸಂಪರ್ಕ ಮಾಡಿದಿರಾ? ಯಾರೋ ಒಬ್ಬರು ಕೇಳಿದರು, ಈ ಫೈವ್‌ಸ್ಟಾರ್ ಹೋಟೇಲ್ ಮತ್ತು ಸೆವನ್ ಸ್ಟಾರ್ ಹೋಟೇಲ್ ಬೇಕು ಎಂದು, ಅದಕ್ಕಾಗಿ ನೀವು ಈ ಕಾನೂನನ್ನು ತರುತ್ತೀರಾ? ಅದನ್ನು ಪಕ್ಕದಲ್ಲಿಡಿ. ಅದಕ್ಕಿಂತ ಬಹಳ ಮುಖ್ಯ, ಇದಕ್ಕೆ ನೀವು ಆರ್ಡಿನನ್ಸ್‌ನ್ನು ತಂದಿರಿ, ಈ ಆರ್ಡಿನನ್ಸ್‌ನ್ನು ಮೂರು ಸಲ ರಾಜ್ಯಪಾಲರು ವಾಪಸ್ಸು ಕಳುಹಿಸಿರುವುದು ಏತಕ್ಕೆ? ಉತ್ತರವನ್ನು ಕೊಡುತ್ತೀರಾ? ತರಾತುರಿಯಲ್ಲಿ ಈ ಆರ್ಡಿನನ್ಸ್‌ನ್ನು ತಂದಿರಿ, ಇದನ್ನು ಮಾಡಿಯೇ ಬಿಡಬೇಕು. ಒಂದು ಫ್ಲೋರ್ ಎಕ್ಸಟ್ರಾ ಕೊಟ್ಟು ಬಿಡಬೇಕು. ಯಾರು ಯಾರು ಡೀವಿಯೇಷನ್ ಮಾಡಿದ್ದಾರಲ್ಲಾ ಅವರ ಹತ್ತಿರ ದುಡ್ಡು ತೆಗೆದುಕೊಂಡು ರೆಗ್ಯುಲೈಸ್ ಮಾಡಬೇಕೆಂದು ಈ ಆರ್ಡಿನನ್ಸ್‌ನ್ನು ತಂದಿರಲ್ಲಾ ಆ ಸುಗ್ರಿವಾಜ್ಞೆಯನ್ನು ರಾಜ್ಯಪಾಲರು ಮೂರು ಸಲ ಏತಕ್ಕೆ ವಾಪಸ್ಸು ಕಳುಹಿಸಿದರು. ಅವರ ಕ್ಲಾರಿಫಿಕೇಷನ್‌ಗೆ ನಿಮಗೆ ಏತಕ್ಕೆ ಉತ್ತರವನ್ನು ಕೊಡುವುದಕ್ಕೆ ಆಗಿರಲಿಲ್ಲ. ಇದಕ್ಕೂ ಕೂಡ ನೀವು ಉತ್ತರವನ್ನು ಕೊಡಬೇಕು. ಮೂರನೆಯದು ಈ ಕಾನೂನಿಂದ ನಾನು ಯಾವ ಕಾನೂನು ಯಾವ ಸೆಕ್ಷನ್ ಎಂದು ಆಮೇಲೆ ಬರುತ್ತೇನೆ. law abiding citizens ಯಾರು ಕಾನೂನನ್ನು ಪಾಲಿಸಬೇಕೆಂದು ಇದ್ದಾನಲ್ಲಾ, ಅವನಿಗೆ ನೀವು ಭೇಷ್ ಅನ್ನುವುದಿಲ್ಲ. ಬರೀ ಅವನಿಗೆ ಇದು ಡಿಸ್‌ಇನ್‌ಸೆಂಟಿವ್ ಆಗಿದೆ. ಅನ್ಯಾಯ ಮಾಡುವವನಿಗೋಸ್ಕರ ಒಂದು ಕಾನೂನು. ನೀವು ಅನ್ಯಾಯ ಮಾಡಿ ದುಡ್ಡು ಕೊಡಿ. ಡಬಲ್ ಕೊಡುತ್ತೀರಾ? ತ್ರಿಬಲ್ ಕೊಡುತ್ತೀರಾ? ಹಣ ಕೊಡಿ, ನೀವು ಅನ್ಯಾಯವನ್ನು ಮಾಡಿ. ಕಾನೂನನ್ನು ಫಾಲೋ ಮಾಡಬೇಡಿ. ಆ ಬೈಲಾಸ್ ಹಾಗೂ ಬಿಲ್ಡಿಂಗ್ ರೆಗ್ಯುಲೇಷನನ್ನು ಬೆಂಕಿಗೆ ಹಾಕಿ. ನಾವು ನಿಮಗೆ ರಕ್ಷಣೆ ಕೊಡುವುದಕ್ಕೆ ಇದ್ದೇವೆ. ಅದಕ್ಕೋಸ್ಕರವಾಗಿ ಒಂದು ಬಿಲ್‌ನ್ನು ತರುತ್ತೇವೆ. ಇದೇನಾ ನಾವು ಸಮಾಜದಲ್ಲಿ ಒಬ್ಬ ಲಾ ಅಬೈಡಿಂಗ್ ಸಿಟಿಜನ್‌ಗೆ ಸಹಕಾರ ಕೊಡುವುದು? ಅದಕ್ಕೋಸ್ಕರವಾಗಿ ಒಂದು ಕಾನೂನು 14 (ಬಿ) (1) ನೀವು ಹೇಳಿದಿರಿ.only for star hotels, additional floor...

ಯಾರು ಕೇಳಿದರು? ಬಹಳ ಮುಖ್ಯವಾದುದು, ಏತಕ್ಕೋಸ್ಕರ ಈ ಒಂದು ಸ್ಪೇಷಲ್ ಪ್ರಾವಿಷನ್ ಅನ್ನು ಅಡಿಯಲ್ಲಿ ತರುತ್ತಿದ್ದೀರಿ? ಇದುವರೆಗೆ ನಾವೂ ಕೂಡ ಅನೇಕ ಕಡೆಗೆ ಓಡಾಡಿದ್ದೇವೆ. ಎಲ್ಲೂ ಕೂಡ ಒಂದು ಫ್ಲೋರ್ ನಮಗೆ ಬೇಕು ಎಂದು ಯಾವ ಫೈವ್‌ಸ್ಟಾರ್ ಹೋಟೇಲ್‌ದವರು ಕೇಳಿದ್ದು ಎಲ್ಲೂ ಇಲ್ಲ. ಫೈವ್‌ಸ್ಟಾರ್ ಹೋಟೇಲ್‌ದವರು ಬೇಕು ಎಂದು ನಿಮ್ಮನ್ನು ಮಾತ್ರ ಬಂದು ಕೇಳಿದಿರಾ? ಆಮೇಲೆ ಅಡಿಷನಲ್ ಎಫ್‌ಎಆರ್ ಕೊಡುವುದು, ನಾನು ಆಗಲೇ ಹೇಳಿದಂತೆ; ಆ ಏರಪೋರ್ಟ್ ಕ್ಲಿಯರನ್ಸ್ ತೆಗೆದುಕೊಳ್ಳಬೇಕು, ಅದನ್ನೂ ಕೂಡ ಮಾಡಿರುವುದಿಲ್ಲ. ಇವತ್ತು ಟೂರಿಸಮ್ ಬಗ್ಗೆ

ಹೇಳುತ್ತೇನೆ. ಬಿಸಿನೆಸ್ ಎಂತಹ ರಿಸೆಷನ್‌ನಲ್ಲಿ ಇದೆ ಎಂದರೆ; ಎಲ್ಲಾ ಸ್ಟಾರ್ ಹೋಟೇಲ್‌ಗಳಲ್ಲಿ 30-40 ಪರ್ಸೆಂಟ್ ಡಿಸ್ಕೌಂಟ್ ಕೊಟ್ಟರೂ ಹೋಗುತ್ತಿಲ್ಲ. ಆ ಒಂದು ಪರಿಸ್ಥಿತಿ ಇದೆ. ಅವರು ಖಂಡಿತವಾಗಿ ಒಂದು ಫ್ಲೋರ್ ಕೇಳುವ ಪರಿಸ್ಥಿತಿಯಲ್ಲಿ ಇಲ್ಲ. ಯಾರೋ ಒಬ್ಬರು ತುಂಬಾ ಇನ್‌ವೆಸ್ಟ್ ಮಾಡಿಬಿಟ್ಟು ಅವರು ಒಂದು ಹೋಟೇಲ್ ಕಟ್ಟುತ್ತಿದ್ದಾರೆ. ಅವರು ನಿಮ್ಮನ್ನು ಕೇಳುತ್ತಿದ್ದಾರೆ, ನೀವು ಅವರಿಗೆ ಕೊಡುತ್ತಿದ್ದೀರಾ? ನನಗೆ ಗೊತ್ತು, ಇದೊಂದು ವಿಚಿತ್ರ. ಎಫ್‌ಎಆರ್ ಬೇಕು ಎನ್ನುವವರಿಂದಲೇ ಸ್ಟಾರ್ ಹೋಟೇಲ್ ಕಟ್ಟಬೇಕು. ಅದು ನಿಮ್ಮ ಸರ್ಕಾರದ ನಿಯಮ. ಆಮೇಲೆ ಸೆಕ್ಷನ್ 18 ಆ ಸೆಕ್ಷನ್ 18ನ್ನು ನೀವು ಏನು ಮಾಡುತ್ತಿದ್ದೀರೆಂದರೆ : Change of land usage. "Where permission for change of land use or development of land or building is granted under section 14(A) or section 15 or section 17 and such change of land use of development is capable of yielding a better income to the owner, the planning Authority may levy a prescribed fee not exceeding one- third of the estimated..... ನಾವು ಇವತ್ತು ಲ್ಯಾಂಡ್ ಯೂಸೇಜ್‌ನ್ನು ಯಾವ ರೀತಿ ಮಾಡಿದ್ದೇವೆ. ಎಸ್‌ನ್‌ಷಿಯಲ್ ಯೂಸ್, ಕಮರ್ಷಿಯಲ್ ಯೂಸ್, ಇಂಡಸ್ಟ್ರೀಯಲ್ ಮತ್ತು ಮನೆಗೆ ಯೂಸ್. ಯಾರೋ ಒಬ್ಬ ವ್ಯಕ್ತಿ ತನ್ನ ಯುಸೇಜನ್ನು ಚೆಂಜ್‌ಮಾಡಿಕೊಳ್ಳಬೇಕೆಂದರೆ ಆ ಕೇಸ್ ನೋಡುವುದು ಹೇಗೆ? ನೀವು ಬ್ಲಾಂಕೇಟ್‌ಗೆ ಅವಕಾಶ ಕೊಡುವುದು ಹೇಗೆ? ನೀವು ಇದನ್ನು ಹಿಂದೆ ಮುಂದೆ ನೋಡದೇ ಇದನ್ನು ವಿವೇಚನೆ ಇಲ್ಲದೆ ತಂದರೆ Predominantly residential areaದಲ್ಲಿ ಫ್ಯಾಕ್ಟರಿ ಬರುವುದನ್ನು ನೀವು ತಡೆಯುತ್ತೀರಾ? ಮುಂದೆ ಸಿಡಿಪಿ ಬಗ್ಗೆ ಕೂಡ ಹೇಳುತ್ತೇನೆ. ಅದಕ್ಕೋಸ್ಕರವಾಗಿ ಈ ರೀತಿ ಒಂದು ಬ್ಲಾಂಕೇಟ್ ಪರ್ಮಿಷನ್ ಕೊಡುವುದು ಯಾರಿಗೂ ಕೂಡ ಕೊಡುವುದು ಒಳ್ಳೆಯದಲ್ಲ. ಎರಡನೆಯದು ನೀವು ಮಾರ್ಕೇಟ್ ವ್ಯಾಲ್ಯೂ ಎಂದು ಹೇಳಿದ್ದೀರಿ. ಮಾರ್ಕೇಟ್ ವ್ಯಾಲ್ಯೂ ಡಿಟರ್ಮಿನ್ ಮಾಡುವುದಕ್ಕೆ ಯಾರ್ಡ್‌ಸ್ಟಿಕ್ ಏನು? What is the market value? ಒಂದು ಫೇರ್ ಮಾರ್ಕೇಟ್ ವಾಲ್ಯೂ ಅಕ್ಚುಯಲ್ ಮಾರ್ಕೇಟ್ ವಾಲ್ಯೂನಾ? ನೀವು ಸ್ಟಾಂಪ್ ಅಕ್ಟ್ ಮೇಲೆ ಮಾಡಿಬಿಟ್ಟಿದ್ದೀರಲ್ಲಾ ಅದಕ್ಕೂ ಇದಕ್ಕೂ ಸಂಬಂಧ ಇಲ್ಲದ ಮಾರ್ಕೇಟ್ ವ್ಯಾಲ್ಯೂನಾ? Who is going to fix it? ಅದು ಒಂದು ನನ್ನ ಪ್ರಶ್ನೆ. ಅದನ್ನು ನಾನು ಕ್ಲಿಯರ್ ಮಾಡಿಲ್ಲ. ಸನ್ಮಾನ್ಯ ಸಚಿವರೇ, ಅದಕ್ಕೂ ಮತ್ತು ವಾಸ್ತವಾಂಶಕ್ಕೂ ಸಂಬಂಧವೇ ಇಲ್ಲ. ಇವತ್ತು ಅದಕ್ಕೋಸ್ಕರ ಆಕ್ಟಿವಿಟೀಸ್ ಎಲ್ಲಾ ಸ್ಥಗಿತವಾಗಿರುವುದು. ಯಾವುದೋ ಒಂದು ರೂಲ್ ಇಟ್ಟುಕೊಂಡು ಫಿಕ್ಸ್ ಮಾಡಿಬಿಟ್ಟಿದ್ದಾರೆ. ಅದಕ್ಕೋಸ್ಕರವಾಗಿ ತಮ್ಮ ಗಮನವನ್ನು ಇಲ್ಲಿ ಸೆಳೆಯುತ್ತಿದ್ದೇನೆ. ಸೆಕ್ಷನ್ 18(ಎ) ಸೆಸ್ ಬಗ್ಗೆ ತಾವು ಹೇಳಿರುತ್ತೀರಿ. ಸೆಸ್‌ನ್ನು ತಾವು ಕಲೆಕ್ಟ್ ಮಾಡಬೇಕು. ಯಾರು ಯಾರು ಯೂಸ್ ಮಾಡುತ್ತಾರೆ ಅವರ ಹತ್ತಿರ ಸೆಸ್ ಕಲೆಕ್ಟ್ ಮಾಡಬೇಕು. ಇವತ್ತು ನೀವು ಬಿಲ್ ಪಾಸ್ ಮಾಡಿದರೆ, ಇವತ್ತಿನಿಂದ ನೀವು ಬಿಲ್ ಕಲೆಕ್ಟ್ ಮಾಡುವುದಕ್ಕೆ ಪ್ರಾರಂಭ ಮಾಡುತ್ತೀರಾ? ಒಂದು ದಿನದಿಂದ ಆ ರಿಂಗ್ ರೋಡ್‌ನ್ನು, ಅಥವಾ ಒಂದು ವಾಟರ್ ಸಪ್ಲೈನ್ನು ಅಥವಾ ಒಂದು ರೋಡ್‌ನ್ನು ಕೊಡುವುದು ಎಷ್ಟು ದಿವಸದಲ್ಲಿ ಕೊಡಬೇಕೆಂದು ನೀವು ಫಿಕ್ಸ್ ಮಾಡುತ್ತೀರಾ? Is there any time frame?

ಎಷ್ಟು ದಿವಸ ಎಂದು ಅವರು ಕಲೆಕ್ಟ್ ಮಾಡಿಕೊಳ್ಳುತ್ತಾ ಹೋಗಬೇಕು. ಬೆಂಗಳೂರಿನದ್ದು ನಾನು ಹೇಳುತ್ತೇನೆ. ಕಾವೇರಿ ನಾಲ್ಕನೆ ಹಂತ ಎಷ್ಟು ವರ್ಷಗಳಿಂದ ಕಲೆಕ್ಟ್ ಮಾಡಿಕೊಂಡು ಬರುತ್ತಿದ್ದಾರೆ. ರಿಂಗ್ ರೋಡದ್ದು ಎಷ್ಟು ವರ್ಷಗಳಿಂದ ಕಲೆಕ್ಟ್ ಮಾಡಿಕೊಂಡು ಬರುತ್ತಿದ್ದಾರೆ. ಅವರು ಇನ್ನು ಎಷ್ಟು ವರ್ಷ ಕಟ್ಟಬೇಕು?. Should there not be a time frame?

ಇಷ್ಟು ದಿವಸದಲ್ಲಿ ನಾವು ಮುಗಿಸುತ್ತೇವೆ. ಇಷ್ಟು ದಿವಸದಲ್ಲಿ we will deliver the road, ಇಷ್ಟು ದಿವಸದಲ್ಲಿ we will deliver the drinking water project, ಎಂದು ಮಾಡಬೇಕು ತಾನೇ? ಅದೂ ಕೂಡ ಇಲ್ಲ. ಕಟ್ಟುವವರು ಇದ್ದಾರೆ ನಾವು ತೆಗೆದುಕೊಳ್ಳಬೇಕೆಂಬುದು ಒಂದೇ ಧೋರಣೆ ಇವತ್ತು ಆಗಿದೆ. ಇನ್ನೂ Sce 77(FF) proposes to regularise all buildings constructed in deviation of the sanctioned plan.

ಡೈಮಂಡ್ ಡಿಸ್ಟ್ರಿಕ್ಟ್ ಎಲ್ಲಾ ಕೂಡ ಇದರಲ್ಲಿ ಬರುತ್ತದೆ. ಇವತ್ತು ನನಗೆ ಬಹಳ ಆಶ್ಚರ್ಯವಾಗುವುದೆಂದರೆ: ಹೈಕೋರ್ಟಿನ ಜಡ್ಜಮೆಂಟ್‌ಗಳು ಇವೆ. ಸುಪ್ರೀಂಕೋರ್ಟಿನ ಜಡ್ಜ್‌ಮೆಂಟ್‌ಗಳು ಇವೆ. ಪ್ರೋಪೀಪಲ್ ಜಡ್ಜ್‌ಮೆಂಟ್‌ಗಳು ಇವೆ. ಅದಕ್ಕೆಲ್ಲಾ ಒಂದು ಇತಿ ಶ್ರೀ ಹಾಕಿ ಒಂದು ಮುಸುಕನ್ನು ಎಳೆದು ಈ ಒಂದು ಅಮೆಂಡ್‌ಮೆಂಟ್‌ನ್ನು ತರುವುದಕ್ಕೆ ಹೋಗುತ್ತಿದ್ದೀರಿ. ಹಣ ಇರುವವನಿಗೆ ನೀವು ಹಣ ಕೊಡು, ನೀನು ವೈಲೇಟ್ ಮಾಡು. ಎಷ್ಟು ಬೇಕಾದರೂ ಕಟ್ಟಿಕೋ? ಹಿಂದೆ ಕಾರ್ಪೊರೇಷನ್‌ದಲ್ಲಿ 5 ಪರ್ಸೆಂಟ್ ಡಿವಿಯೇಷನ್ ಇತ್ತು. ನಮ್ಮ ಒಬ್ಬ ಆಯುಕ್ತರು 25 ಪರ್ಸೆಂಟ್‌ವರೆಗೆ ಡಿವಿಯೇಷನ್ ಮಾಡಿಕೊಳ್ಳಬಹುದೆಂದು ಒಂದು ಸರ್ಕ್ಯುಲರ್ ಇಷ್ಯೂ ಮಾಡಿದ್ದರು. That has been struck down in the HIgh Court.

ಇವತ್ತು ನೀವು 100 ಪರ್ಸೆಂಟ್ ಮಾಡಿಕೊಳ್ಳಬಹುದು. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರೂ ಕೂಡ ಹೇಳಿದಂತೆ: ದಯವಿಟ್ಟು ಇದನ್ನು ಹಿಂದೆ ಮುಂದೆ ನೋಡದೆ ಇಲ್ಲಿ ಇಂಟ್ರಡ್ಯೂಸ್ ಮಾಡಿ ರಾಜ್ಯಪಾಲರೇ ಈ ಸುಗ್ರಿವಾಜ್ಞೆಯನ್ನು ಒಪ್ಪಿಕೊಳ್ಳದೆ ಇರುವಂಥದ್ದನ್ನು ಇಲ್ಲಿ ನಾವು ಒಪ್ಪಿಕೊಳ್ಳುವಂಥ ಪ್ರಸಂಗ ಬರುವುದಿಲ್ಲ. ಇದರ ಸಾಧಕ-ಬಾಧಕ ನೋಡೋಣ. ಸಮಾಜದ ಜನಕ್ಕೆ ಅನ್ನಿಸಬೇಕು. ನಾನು ಕಾನೂನನ್ನು ಅನುಸರಿಸಿದರೆ ಸರ್ಕಾರ ನನ್ನ ಕಡೆ ಇದೆ ಎಂದು. ಕಾನೂನನ್ನು ಮುರಿಯುವುದಕ್ಕೋಸ್ಕರ ಸರ್ಕಾರ ಇದೆ. ಕಾನೂನನ್ನು ಮುರಿದರೆ, ಒಂದಿಷ್ಟು ಹಣವನ್ನು ಬಿಸಾಕಿದರೆ ನಾನು ಮಜವಾಗಿ ಇರಬಹುದು, ಅದು ಬೇಡ. ಒಂದು ಹೋಟೇಲ್ ನವರಿಗಾಗಿ ಒಂದು ಬಿಲ್ ತರುವುದೂ ಕೂಡ ಒಳ್ಳೆಯದಲ್ಲ. ಈ ಎಲ್ಲಾ ಕಾರಣದಿಂದ ದಯವಿಟ್ಟು ಇದನ್ನು ಒಂದು ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿ, ಅಲ್ಲಿ ಕೂಲಂಕುಷವಾಗಿ ಚರ್ಚೆ ಮಾಡೋಣ. ಯಾವುದೇ ಒಂದು ಬಿಲ್ it should be a pro-people bill, progressive bill.

ಯಾವುದೇ ಒಂದೊಂದು ಕಾಲಕ್ಕೆ ತೆಗೆದುಕೊಂಡು ಹೋಗಬಾರದು. ಈ ಎಲ್ಲಾ ಕಾರಣದಿಂದ ಈಗ ತಂದಿರುವ ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡು ಸೆಲೆಕ್ಟ್ ಕಮಿಟಿಗೆ ಇದನ್ನು ರೆಫರ್ ಮಾಡಬೇಕೆಂದು ಆಗ್ರಹಿಸುತ್ತೇನೆ.

ಶ್ರೀ ಎಸ್.ಪಿ. ಮುದ್ದ ಹನುಮೇಗೌಡ (ಕುಣಿಗಲ್) : ಮಾನ್ಯ ಅಧ್ಯಕ್ಷರೆ, ಇವರು ಬಿಲ್ಲನ್ನು ತಂದಿದ್ದಾರೆ, ಅದರಲ್ಲಿ ಬಹಳ ಅಚಾತುರ್ಯವನ್ನು ಮಾಡಿದ್ದೀರಿ.

"Regularisation of certain places"

The penalty prescribed is :

". . . regularise buildings constructed in deviation of sanctioned plan subject to such limits and payment of such penalty of not less than the market value of such deviated areas as may be prescribed."

"Not less than the market value of such deviated areas as may be prescribed." That is the penalty which you have prescribed under the amendment insertion to section 76FF.

ಅಧ್ಯಕ್ಷರು : ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಇದೆ. ಸಭಾನಾಯಕರು ಬಂದಿದ್ದಾರೆ. ದಯಮಾಡಿ ಬಿಸಿನೆಸ್ ಅಡ್ವೈಸರಿ ಕಮಿಟಿ ಮೆಂಬರ್‌ಸ್‌ಗಳು ಬರಬೇಕು.

ಉಪಾಧ್ಯಕ್ಷರು : (ಶ್ರೀ ಚಂದ್ರಶೇಕರ್ ರೆಡ್ಡಿ ಮದನಾ)ರವರು ಅಧ್ಯಕ್ಷ ಪೀಠವನ್ನಲಂಕರಿಸಿದರು.

ಶ್ರೀ ಎಸ್. ಪಿ. ಮುದ್ದು ಹನುಮೇಗೌಡ : ಇದರಲ್ಲಿ ಏನಾಗಿದೆ ಎಂದರೆ ಈಗ Sec 76 ಎಫ್ಎಫ್‌ನಲ್ಲಿ ಹೊಸದಾಗಿ ನೀವು ಪ್ರಾವಿಜನ್‌ನ್ನು ಇನ್‌ಸರ್ಷನ್ ಏನು ಮಾಡಿದ್ದೀರಿ ಅದರಲ್ಲಿ,

The amount of penalty which you have prescribed is high. 'Not less than the market value of such deviated areas as may be prescribed.' That is the amount of penalty which you have prescribed under section 76FF. ಸಪ್ಪೋಸ್ ಅವನು ಕಟ್ಟಲಿಲ್ಲವೆಂದರೆ the Government has got every right under section 76FF to forfeit that building. Suppose the amount is not paid under section 76FF, the government has got every right to forfeit that building, the whold building, not the deviated building for which he is expected to pay the penalty. You have got every right to forfeit the whole building. After proclamation and then after 15 days, "until after expiration of at least 15 days from the latest date on which any such notice shall be published in the prescribed manner." There afterwards a provision is created :

"Provided that if the owner of such building or part of the building or any person interested in such building or part of the building pays to the State Government an amount equivalent to two times the current market value of such building or part of the building before it is disposed of ...

Penalty prescribed is only to the deviated area not less than the market value of that deviated portion. If the entire property is forfeited, then the owner of the building is expected to pay two times the market value of the building.

SRI B.N. BACHHE GOWDA : That is a deterrent in the Act to avoid deviation. See 76FF has that meaning. It is to deter his deviation.

ಶ್ರೀ ಎಸ್. ಪಿ. ಮುದ್ದುಹನುಮೇಗೌಡ : ಒಂದು ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಎಷ್ಟು ಡಿವಿಯೇಟ್ ಆಗಿದೆಯೋ ಅದಕ್ಕೆ ಮಾರ್ಕೆಟ್ ವ್ಯಾಲ್ಯೂ ಎಷ್ಟಿದೆಯೋ ಅಷ್ಟನ್ನು ನೀವು ಕೊಟ್ಟು ರೆಗುಲರೈಸ್ ಮಾಡಿಕೊಳ್ಳಿ ಎಂದು you are regularising the illegal act. We have no objection. You are regularising the illegal act. It is alright. ಸಪ್ಪೋಸ್ ಅವನೇನಾದರೂ ಆ ಅಮೌಂಟನ್ನು ಕೊಟ್ಟು ರೆಗುಲರೈಸ್ ಮಾಡಿಕೊಳ್ಳಲು ಆಗದಿದ್ದರೆ

For obvious reasons, due to some reasons, he could not pay that amount and get the property regularised. ನೀವು ಆವಾಗ ಏನು ಮಾಡುತ್ತೀರಿ? ನೀವು ಪ್ರೋಕ್ಲಮೇಷನ್ ಮಾಡಿಬಿಟ್ಟು ಅದನ್ನು ಸರ್ಕಾರಕ್ಕೆ ಫೋರ್‌ಫಿಟ್ ಮಾಡಿಕೊಂಡು ಬಿಡುತ್ತೀರಿ. ಆಮೇಲೆ

Suppose the owner of the building wants to retain the property, do you know the amount which he is expected to pay? ನೀವು ಆ ಬಿಲ್ಡಿಂಗನ್ನು ಆಕ್ಷ್ಯನ್ ಮಾಡುತ್ತೀರಿ, ಅದು ಮಾರ್ಕೆಟ್ ವ್ಯಾಲ್ಯೂಗಿಂತ ಅದು ಜಾಸ್ತಿ ಹೋಗುತ್ತದೆಯೇ?

Forfeited property, you are expected to sell it in auction. That is what the provision has created. ನೀವು ಓಪನ್ ಆಕ್ಷನ್‌ನಲ್ಲಿ ಇಟ್ಟಾಗ, ನಿಮಗೆ ಎಷ್ಟು ಹಣ ಬರಬಹುದು ಫ್ರೋರ್‌ಫೀಟೆಡ್ ಬಿಲ್ಡಿಂಗ್‌ನಿಂದ ಅಟ್ ದಿ ಮೋಸ್ಟ್ ಅಂದರೆ ಮಾರ್ಕೆಟ್ ವ್ಯಾಲ್ಯೂ ಬರಬಹುದು.

Market value at the most, even a little lesser than the market value.

Suppose if the owner wants to retain the property, the provision cerated here is, that he has to pay two times the market value of that buliding. What is this? It is certainly injustice, illogical. ನೀವು ಕಾನೂನನ್ನು ಮಾಡುವಾಗ, ಯಾವುದನ್ನು ಮಾಡುವುದಕ್ಕೆ ಆಗುತ್ತದೆಯೋ, ಯಾವುದಕ್ಕೆ ಅವಕಾಶವಿದೆಯೋ ಅಂಥವನ್ನು ತಾವು ಮಾಡಬೇಕು.

You are trying to insert the provision which cannot be done. This is an impossibility. It is very bad. This is not in good taste. Next is 'Validation of levy and collection of cess and surcharge for certain purpose.' ಇದರಲ್ಲಿ ಏನು ಮಾಡಿದ್ದೀರಿ; ನೀವು ನ್ಯಾಯಾಲಯದಿಂದ ಸಂಪೂರ್ಣವಾಗಿ ಅವರ ಅಧಿಕಾರವನ್ನು ತೆಗೆದುಹಾಕಿಬಿಟ್ಟಿದ್ದೀರಿ. ಯಾರೂ ಸಹ ಕೋರ್ಟಿಗೆ ಹೋಗುವ ಹಾಗಿಲ್ಲ. ನೀವು ಏನಾದರೂ. .

'Validation of levy and collection of cess and surcharge for certain purpose.'

(a) all acts, proceedings or things done or taken by the *Planning* Authority or any of its officer in connection with the levy assessment or collection of such cess or surcharge for all purposes be deemed to be

and to have always been done or taken in accordance with law."

You have to presume that everything has been done in accordance with law. It is very bad. You cannot presume. Unless it is done properly, unless all legal acts are being followed, you cannot presume that everything has been done in accordance with law.

(b) no suit or other proceedings shall be maintained or continued in any court or tribunal or before any authority for the refund of any such cess or surcharge."

(c) no court shall enforce any decree or order to direct the refund of any such cess and surcharge."

ಇದು ಏನಾಗುತ್ತದೆ ಎಂದರೆ ಇದು ಒಂದು ತರಹ ಜಂಗಲ್ ಲಾ. ಇದು ಡಿಕ್ಟೇಟರ್‌ಶಿಫ್‌ನಲ್ಲಿ ಏನೋ ಒಂದು ತರಹ ಕಾನೂನನ್ನು ನೀವು ಇಂಟ್ರಡ್ಯೂಸ್ ಮಾಡುವುದಕ್ಕೆ ಹೊರಟ್ಟಿದ್ದೀರಿ ಎನ್ನುವಂತಹ ಅಭಿಪ್ರಾಯ ಬರುತ್ತದೆ. ಇದು ಯಾರಿಗೆ ಅನುಕೂಲವಾಗುತ್ತದೆ, ಯಾರಿಗೆ ಅನಾನುಕೂಲವಾಗುತ್ತದೆ ಎನ್ನುವ ಪ್ರಶ್ನೆ ಒಂದು ಕಡೆ ಇದೆ. ಅದನ್ನು ಪಟ್ಟಣ ಪ್ರದೇಶದಲ್ಲಿರುವವರು, ನಗರಪ್ರದೇಶದಲ್ಲಿರುವವರು, ಅಥವಾ ಮೆಟ್ರೋಪಾಲಿಟಿನ್ ಏರಿಯಾದಲ್ಲಿ ಇರುವಂಥವರು

It is for them to think of. ನಾನು ಏನನ್ನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಯಾವುದೇ ಒಂದು ಕಾನೂನಿನಲ್ಲಿ ಏನೇ ತೊಡಕುಗಳಿದ್ದರೂ ಕೂಡ, ಯಾವುದೇ ಕಾನೂನನ್ನು ಪರಿಪಾಲನೆ ಮಾಡುವಾಗ, ಅದರಲ್ಲಿ ತೊಡಕಿದ್ದರೂ ಕೂಡ ಅದನ್ನು ಸರಿ ಮಾಡತಕ್ಕಂತಹ ಅಧಿಕಾರ ಯಾವಾಗಲೂ ಕೂಡ ಈ ರಾಷ್ಟ್ರದ ಸ್ವತಂತ್ರ ಪ್ರಜೆಗೆ ಇರಲೇಬೇಕಾಗುತ್ತದೆ.

If the officer entrusted under this provision has done any mistake, then who is there to rectify the mistake? See, according to this amended Act, no court shall exercise any suit. You cannot question the act of the officer in any court, in any tribunal or before any authority. Whatever the decision taken by the officer, that becomes final and it is binding. It is arbitrary. It is illegal. ನಿಮ್ಮ ಉದ್ದೇಶ ಏನಾಗಿದೆ ಎಂದರೆ ಈ ಕಾನೂನನ್ನು ತರುವುದಕ್ಕೆ ಏನು ಇದೆ ಎಂಬ ಬಗ್ಗೆ ನಾನು ಹೋಗುವುದಿಲ್ಲ. ಆದರೆ ನೀವು ಇವತ್ತು ಇಂಟ್ರಡ್ಯೂಸ್ ಮಾಡುತ್ತಿದ್ದೀರಿ. ಇದು ಬಹಳ ಇಲ್ಲಾಜಿಕಲ್ ಆಗಿದೆ. ಇದನ್ನು ಕಾನೂನಿನಲ್ಲಿ ಚಾಲನೆ ಮಾಡುವುದಕ್ಕೆ ಅವಕಾಶವಿಲ್ಲ. ಇದರಿಂದ ಕಾನೂನಿನಲ್ಲಿ ತೊಡಕುಗಳು ಜಾಸ್ತಿಯಾಗುತ್ತವೆ. ಇದರಿಂದ ನ್ಯಾಯಾಲಯದಲ್ಲಿ ದಾವೆಗಳು ಹೆಚ್ಚಾಗಿ ಹುಟ್ಟುವಂತಹ ಅವಕಾಶವನ್ನು ನೀವು ಕ್ರಿಯೇಟ್ ಮಾಡಿಕೊಟ್ಟಿದ್ದೀರಿ. ಇದು ಸರಳವಾಗಿಲ್ಲ, ಕಾನೂನು ಹೇಗೆ ಸರಳವಾಗಿರಬೇಕೆಂದರೆ ಅದು ಪ್ರತಿಯೊಬ್ಬನಿಗೂ ಅರ್ಥವಾಗುವ ರೀತಿಯಲ್ಲಿ ಇರಬೇಕು. ಅವನು ಅದನ್ನು ಪರಿಪಾಲನೆ ಮಾಡುವುದಕ್ಕೆ ಅವಕಾಶವಾಗುವ ಸ್ಥಿತಿಯಲ್ಲಿ ಇರಬೇಕು. ಏನೇ ತಪ್ಪು ಮಾಡಿದರೂ ಕೂಡ, ಆ ವ್ಯಕ್ತಿಗೆ ಕಾನೂನಿನ ಅಡಿಯಲ್ಲಿ ಆ ಹಕ್ಕನ್ನು ಸರಿಪಡಿಸತಕ್ಕಂತಹ ಅಧಿಕಾರ ಯಾವಾಗಲೂ ಕೂಡ..

It is the right of an individual to get the matter set right in the court of law or any authority or the tribunal. So, you cannot take away that right. You cannot prevent a man to get his problem redressed before the court. ಇಂತಹ ಒಂದು ಕಾನೂನನ್ನು ತರುವುದು ಖಂಡಿತವಾಗಿಯೂ ಕೂಡ ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಇದನ್ನು ಹಿಂದಕ್ಕೆ ಪಡೆದುಕೊಂಡು ನೀವು ಯಾವುದೇ ಒಳ್ಳೆಯ ದೃಷ್ಟಿಯಿಂದ ಈ ಕಾನೂನನ್ನು ಮಾಡಬೇಕೆಂದು ಹೊರಟಿದ್ದೀರಿ, ಇದನ್ನು ಜಾಯಿಂಟ್ ಸೆಲೆಕ್ಷನ್ ಕಮಿಟಿಗೆ ಹಾಕಬೇಕು. ಇದನ್ನು ಸೆಲೆಕ್ಟ್ ಕಮಿಟಿಯಲ್ಲಿ ಹಾಕಿ ಯಾವ ರೀತಿಯಲ್ಲಿ ಮಾಡಿಫೈ ಮಾಡಿ ಈ ಕಾನೂನನ್ನು ರಾಜ್ಯದ ಹಿತದೃಷ್ಟಿಯಿಂದ ತರಬಹುದು ಎಂಬುದರ ಬಗ್ಗೆ ದಯಮಾಡಿ ಸರ್ಕಾರ ಚಿಂತನೆಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀಮತಿ ಪ್ರಮೀಳಾನೇಸರ್ಗಿ (ಚಾಮರಾಜಪೇಟೆ) : ಸನ್ಮಾನ್ಯ ಉಪಾಧ್ಯಕ್ಷರೆ, ಈ ಅಮೆಂಡ್‌ಮೆಂಟ್ ತಂದಿರುವ ಬಗ್ಗೆ ನನಗೆ ಆಶ್ಚರ್ಯವಾಗುತ್ತದೆ. ನನ್ನ ಮನಸ್ಸಿನಲ್ಲಿ ಟೌನ್ ಪ್ಲಾನಿಂಗ್ ಆಕ್ಟ್ ಎನ್ನುವ ಬದಲು ಇದನ್ನು ಟೌನ್ ಡಿಸ್‌ಸ್ಟ್ರಕ್ಷನ್ ಆಕ್ಟ್ ಎಂದು ತಂದಿದ್ದರೆ ಆಗುತ್ತಿತ್ತು. ಏಕೆಂದರೆ Provisions are mutually destructive. ಪ್ಲಾನಿಂಗೇ ಇಲ್ಲ, ನೀವು ಪಟ್ಟಣವನ್ನು ಕಟ್ಟುವುದರ ಜೊತೆಗೆ ಏನಾದರೂ ಮಾಡಿ ನಾವು ರೆಗುಲರೈಸ್ ಮಾಡುತ್ತೇವೆ ಎಂದು ಹೇಳುತ್ತೀರಿ. ಹಾಗಿದ್ದ ಮೇಲೆ ಪ್ಲಾನಿಂಗ್ ಏಕೆ ಬೇಕು? ಪ್ಲಾನಿಂಗ್ ಬೇಡದಿದ್ದರೆ ಈ ಪ್ರಕಾರವಾಗಿ ಇದನ್ನು ತಾವು ವೈಫ್ ಔಟ್ ಮಾಡಿಬಿಟ್ಟು, ರಿಪೀಲ್ ಮಾಡಿಬಿಡಿ ದಯವಿಟ್ಟು ಈ ಸೆಲೆಕ್ಟ್ ಕಮಿಟಿ ಏನೂ ಬೇಡ. ಅದು ಏಕೆ ಬೇಕು. ಅದರ ಬದಲು ಸುಮ್ಮನಿರುವುದು ಮೇಲು. ಇಂತಹ ಕಟ್ಟಡಗಳನ್ನು ಕಟ್ಟುವುದರ ಬದಲು ಸುಮ್ಮನಿರುವುದು ಮೇಲಲ್ಲವೇ? ಎಷ್ಟು ಬೇಕಾದರೂ ಎಫ್‌ಎಆರ್‌ನ್ನು ಕೊಡಬಹುದು ಎಷ್ಟು ಬೇಕಾದರೂ ನೀವು ಎನ್‌ಕ್ರೋಚ್ ಮಾಡಬಹುದು, ಏನು ಬೇಕಾದರೂ ರೆಗುಲರೈಸ್ ಮಾಡಬಹುದು, ಇದಕ್ಕೆ ಲಿಮಿಟೇ ಇಲ್ಲ. ಕಾನೂನಿನಲ್ಲಿ ಯಾವಾಗಲಾದರೂ ಕೂಡ 5 ಪರ್ಸೆಂಟ್ ಮಾಡಿದಾಗಲೂ ಕೋರ್ಟ್ ಹೇಳಿದರೂ ಕೂಡ ಆಗುವುದಿಲ್ಲವೆಂದು ಹೇಳಿದರು. 5 ಪರ್ಸೆಂಟನ್ನು ನೀವು ಕಂಡೋನ್ ಮಾಡಬಹುದೇ ಹೊರತು ಅದರ ಮೇಲೆ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿ 25 ಪರ್ಸೆಂಟ್ ಮಾಡಿದಾಗ ನಮ್ಮ ಹೈಕೋರ್ಟ್ ಅದನ್ನು ಹೊಡೆದು ಹಾಕಿತು. ಇವತ್ತು ನೀವು 100 ಪರ್ಸೆಂಟ್ ಏನು ಬೇಕಾದರೂ ಮಾಡಬಹುದು. ಎಂದು ಹೇಳಿದರೆ ಅದು ಕೋರ್ಟಿನಲ್ಲಿ ನಿಲ್ಲುವುದಿಲ್ಲ. ನೀವು ಈ ಕಾನೂನನ್ನು ಏತಕ್ಕಾಗಿ ತರುತ್ತಿದ್ದೀರಿ ಎಂದು ನಾವು ಕೇಳಬೇಕಾಗುತ್ತದೆ. ಇವರು ಒಂದು ಕಡೆ ರೆಗ್ಯುಲರೈಸ್ ಮಾಡುತ್ತೇವೆಂದು ಹೇಳುತ್ತಾರೆ. ಮತ್ತೊಂದು ಕಡೆ ರೆಗ್ಯುಲರೈಸ್ ಮಾಡಬಾರದು ಎಂದು ಹೇಳುತ್ತಾರೆ. ಅಂದರೆ both are mutually destructive. ಒಂದು ಪ್ರಾವಿಷನನ್ನು ನೋಡಿದರೆ ಇದು ಇನ್ನೊಂದು ಕಾನೂನಿಗೆ ವಿರುದ್ಧವಾಗಿರುವುದರಿಂದ ಎರಡು ಸೆಕ್ಷನ್‌ಗಳಲ್ಲಿ ಅಮೆಂಡ್‌ಮೆಂಟನ್ನು ತರುವುದಕ್ಕೆ ಹೊರಟಿದ್ದೀರಿ, ಅದು ನಿಲ್ಲುವುದಿಲ್ಲ. ಇವರು ಇನ್ನೊಂದು ಮುಖ್ಯವಾಗಿ ತಂದಿರುವುದೇನೆಂದರೆ 1992 ನೇ ಇಸವಿ ಯಿಂದ this is deemed to have come into force.

ನಾನು ತಮ್ಮನ್ನು ಕೇಳುತ್ತೇನೆ. 1992 ನೇ ಇಸವಿಯಿಂದ ಏನು ಬೇಕಾದರೂ ಸೆಸ್‌ನ್ನು ಹಾಕಬಹುದು. ಏನೇ ಸೆಸ್ ಹಾಕಿದರೂ ಕೂಡ ಅದು ಇಟ್ ಇಸ್ ವ್ಯಾಲೀಡ್. ನಿಮಗೆ ಯಾರು ಈ ಅಧಿಕಾರವನ್ನು ಕೊಟ್ಟಿರುತ್ತಾರೆ? ನೀವು 8 ವರ್ಷಗಳಿಂದ ಏನೇನು ಹಾಕಿ ಅನಾಚಾರಗಳನ್ನು ಮಾಡಿದ್ದಿರೋ, ಇವತ್ತು ಯಾವಯಾವ ಬಿಲ್ಡಿಂಗ್‌ನ್ನು ಕಟ್ಟಿದ್ದಿರೋ ಅವುಗಳ ಮೇಲೆಲ್ಲಾ ಕಾನೂನು ಮಾಡಿ ಸೆಸ್‌ನ್ನು ಹಾಕಬಹುದು, ಕಲೆಕ್ಷನ್‌ನ್ನು ಮಾಡಬಹುದು ಎಂದರೆ that will also not be acceptable by any Court of law.ಯಾವುದೂ ಕೂಡ ಊರ್ಜಿತವಾಗತಕ್ಕದ್ದಲ್ಲ. ನೀವು ತಂದಿರತಕ್ಕಂತಹ ಮೂರು ಅಮೆಂಡ್‌ಮೆಂಟ್‌ಗಳು 2 ಎಫ್, 18, 14,76 ಎಫ್‌ಎಫ್ ಏನನ್ನು ತಂದಿದ್ದೀರಿ. ಇದರಲ್ಲಿ ಮುಖ್ಯವಾಗಿ 18. ಯಾವುದೇ ಒಂದು ಸೆಕ್ಷನ್ ಕೂಡ 18 ಎ ಆಗಲಿ, ಸೆಕ್ಷನ್ 18 ಸಬಿಸ್ಟಿಟ್ಯೂಷನ್ 18, ಎ, 14, 14ಬಿ 76 ಎಫ್‌ಎಫ್ ತಂದಿದ್ದೀರಲ್ಲಾ, ಯಾವುದೂ ಕೂಡ ಕೋರ್ಟಿನಲ್ಲಿ ಊರ್ಜಿತವಾಗತಕ್ಕದ್ದಲ್ಲ.

It is more arbitrary ; It is contrary to the planned city. ಯಾವುದೇ ಡೈರೆಕ್ಟೀವ್ ಪ್ರಿನ್ಸಿಪಲ್ಸ್‌ನಲ್ಲಿ ರಾಜ್ಯಾಂಗದಲ್ಲಿ ಕೂಡ a city must be planned ಎಂದು ಇದೆ.

ಅಂದರೆ ಹೇಗಿರಬೇಕು? ರೋಡ್ ಹೇಗಿರಬೇಕು? ಇಷ್ಟು ಅಡಿ ರೋಡ್ ಇರಬೇಕು. ಈಗ ರೆಗ್ಯುಲರೈಸೇಷನ್, ಎಲ್ಲಾ ಕಡೆ ರೋಡ್‌ಗಳನ್ನು ಎನ್‌ಕ್ರೋಚ್ ಮಾಡಿಕೊಂಡು ಬಂದಿದ್ದಾರೆ. ಇಡೀ ಬೆಂಗಳೂರಿನಲ್ಲಿ ಫುಟ್‌ಬಾತ್ ಆವರಣ ಮಾಡಿದ್ದಾರೆ. ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ. ಇದರ ಪ್ರಕಾರ ನೀವು ರೆಗ್ಯುಲರೈಸ್ ಮಾಡುತ್ತೇವೆಂದರೆ ಫುಟ್‌ಪಾತೂ ಬೇಡ ರೋಡೂ ಬೇಡ. ಹಾಗೆ ಇದ್ದಮೇಲೆ ಸಿಟಿ ಏಕೆ ಬೇಕು? ಇವತ್ತು ಎಷ್ಟೋ ಕಡೆ ಡ್ರೈನೇಜ್ ಮೇಲೆ ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ. ನನ್ನ ಅನುಭವದಲ್ಲಿ ಹೇಳುವುದಾದರೆ ಇಡೀ ಬೆಂಗಳೂರಿನಲ್ಲಿ ಡ್ರೈನೇಜ್ ಮೇಲೆ ಬಿಲ್ಡಿಂಗ್‌ಗಳನ್ನು ಕಟ್ಟಿದ್ದಾರೆ. ಇದು ಒಂದು ಫ್ಲೋರ್ ಅಲ್ಲ ಎರಡು ಫ್ಲೋರ್ ಮೂರು ಫ್ಲೋರ್ ಕೂಡ ಕಟ್ಟಿದ್ದಾರೆ. ಅವುಗಳನ್ನೆಲ್ಲಾ ನೀವು ರೆಗ್ಯುಲರೈಸ್ ಮಾಡುವುದಾದರೆ ಈ ಕಾನೂನು ಏತಕ್ಕೆ ಬೇಕು? Town Planning Act has become redundant. It is not necessary at all. ಸುಮ್ಮನೆ ನೀವು ತೆಗೆದು ಹಾಕಿಬಿಟ್ಟು ಒಂದೇ ಒಂದು ಆಕ್ಟ್ ತಂದುಬಿಡಿ. ಇಡೀ ಕರ್ನಾಟಕದಲ್ಲಿ Regularisation Act of all Irregularities of Karnataka ಹಾಗೆ ತಂದು ಬಿಡಿ. ತಂದುಬಿಟ್ಟು ಹೇಗೂ ನಿಮಗೆ ಮೆಜಾರಿಟಿ ಇದೆ ಆಕ್ಟ್ ಪಾಸ್ ಮಾಡಿಕೊಂಡು ಹೊರಟುಹೋಗಿ. ಮನೋಸೋಯಿಚ್ಛೆ ನೀವು ಕಾನೂನು ಮಾಡುವುದಾದರೆ ಲಾ ಆಫ್ ಜಂಗಲ್ ಆಗುತ್ತದೆ. ಲಾ ಆಫ್ ಸಿಟಿ ಆಗುವುದಿಲ್ಲ. ಇದು ಪಟ್ಟಣವೆಂದು ಹೆಸರು ಕರೆಸಿಕೊಳ್ಳುವುದಿಲ್ಲ. ಗ್ರಾಮ ಅನ್ನುವುದಿಲ್ಲ, ಪಟ್ಟಣ ಅನ್ನುವುದಿಲ್ಲ ಇದು ಸಿಟಿ ಅನ್ನುವುದಿಲ್ಲ ; ಅಂದಮೇಲೆ ಇಂತಹ ಕಾನೂನು ಏತಕ್ಕೆ ಬರಬೇಕೆಂಬುದನ್ನು ಯೋಚನೆ ಮಾಡಬೇಕು. ಇದು ನಿಜವಾಗಿಯೂ ಕೂಡ Law of Jungle, not Law of City. ಇಂತಹ ಆಕ್ಟ್‌ನ್ನು ತರುವುದು ನಿಮ್ಮ ಮನಸ್ಸಿನಲ್ಲಿಯೂ ಕೂಡ ಬರಬಾರದಾಗಿತ್ತು It is not a law . ಇಂತಹ ಯೋಜನೆಯನ್ನು it should not have been thought over. I cannot really understand how the Law Department has approved this. I don't know who is behind that. At

whose instance it has been done? It is something surprising. ಕಾನೂನಿಗೆ ವಿರುದ್ಧವಾಗಿ, ಜಡ್ಜ್‌ಮೆಂಟ್‌ಗಳಿಗೆ ವಿರುದ್ಧವಾಗಿ 'Not with standing anything Contained in any decree.. ಎಂದು ಹೇಳುತ್ತೀರಿ, ಅಂದರೆ ಕೋರ್ಟ್‌ನಲ್ಲಿ ಕೊಟ್ಟಿರತಕ್ಕ ಡಿಕ್ರಿ ಜಡ್ಜ್‌ಮೆಂಟ್‌ಗಳು, ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್‌ಗಳು ಎಲ್ಲವನ್ನೂ ಕೂಡ ಸಾರಾಸಗಟಾಗಿ ತೆಗೆದುಹಾಕಿಬಿಟ್ಟು ನಾವು ಯಾವ ಬಿಲ್ಡಿಂಗ್ ಬೇಕಾದರೂ ರೆಗ್ಯುಲರೈಸ್ ಮಾಡುತ್ತೇವೆಂದರೆ it is better that we don't have a legislation at all. ನಮಗೆ ಬೇಕಾಗಿಲ್ಲವಲ್ಲಾ. ಹಾಗಿದ್ದಮೇಲೆ ನಮಗೆ ಲೆಜಿಸ್‌ಲೇಷನ್ ಬೇಕಾಗಿಲ್ಲ. ನಮ್ಮಂತಹವರಿಗೆ ಇಂತಹ ವಿಧಾನಸಭೆಗಳು ಬೇಕಾಗಿಲ್ಲವಲ್ಲಾ. ಇಂತಹ ಕಾನೂನು ತರಬೇಕಾದರೆ, ನಾವು ಕಾನೂನು ಪ್ರಕಾರವಾಗಿ ತರಬೇಕು. ಬೇಕಾಗಿಲ್ಲ, ಸಿಟಿ ಬೇಡ, ದೇಶ ಬೇಡ, ದೇಶದ ಉದ್ಧಾರ ಬೇಡ, ದೇಶದ ಪ್ರಗತಿ ಬೇಡ, ಪ್ಲಾನಿಂಗ್ ಬೇಡ, ಮನಸೋಯಿಚ್ಛೆ ಏನು ಬೇಕಾದರೂ ತರುತ್ತೇನೆ, ಯಾರು ಏನು ಬೇಕಾದರೂ ಕೊಟ್ಟರೂ ರೆಗ್ಯುಲರೈಸ್ ಮಾಡುತ್ತೇನೆ ಹಣ ಸಿಗುತ್ತದೆ ನನಗೆ ತೆಗೆದುಕೊಂಡು ಹೋಗುತ್ತೇನೆ ಎನ್ನುವುದಾದರೆ, it is not worth being there at all, ಇಂತಹ ಅಸೆಂಬ್ಲಿಗಳಲ್ಲಿ ಇಂತಹ ಲೆಜಿಸ್‌ಲೇಷನ್‌ಗಳನ್ನು ತರುವುದಕ್ಕೆ ನನಗಂತೂ ಇದು ಅನಿಸುತ್ತದೆ ಇದಕ್ಕೆ I don't think any right thinking man or any person will approve this. ಇಂತಹ ಕಾನೂನಿಗೆ ಯೋಚನೆ ಕೂಡ ಮಾಡಬಾರದಾಗಿತ್ತು ನೀವು. I will say law-abiding citizens, ಎಲ್ಲಾ ಸಿಟಿಜನ್ಸ್‌ಗೂ, ಕೂಡ ಇದೆ. ಇದನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಿ. It is not worth. ಸೆಲೆಕ್ಟ್ ಕಮಿಟಿಗೂ ಕೂಡ ಬೇಡ ನಾನು ಹೇಳುತ್ತೇನೆ please withdraw this It is not taking into consideration. This paper is worth to be thrown into the dust-bin, ಎಂದು ಹೇಳಿ ಇದನ್ನು ದಯವಿಟ್ಟು ವಾಪಸ್ಸು ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಿಗೆ ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಉಪಾಧ್ಯಕ್ಷರೆ, ಈ ಸರ್ಕಾರಕ್ಕೆ ಒಳ್ಳೆಯ ಸುಗ್ಗಿ ಬಂದಿದೆ. ಏಕೆಂದರೆ ಮುಂದೆ ಬರುವುದು ಚುನಾವಣೆ. ಆ ಚುನಾವಣೆಯನ್ನು ಎದುರಿಸತಕ್ಕ ಸಂದರ್ಭದಲ್ಲಿ ಏನೇನು ಮುಳುಗುವುದಕ್ಕೆ ಸಾಧ್ಯವೋ ಅವೆಲ್ಲಾ ಉಪಾಯಗಳನ್ನು ಇವತ್ತು ಕಂಡುಹಿಡಿದುಕೊಂಡು ಅದರ ಹಿಂದೆ ಬಂದಿರತಕ್ಕ ಈವೊಂದು ಮಸೂದೆ. ಯಾವ ಪ್ರಜ್ಞೆ, ವಿಚಾರ, ಆಲೋಚನೆ, ಚಿಂತನೆ ಇರತಕ್ಕ ಮನುಷ್ಯ ಇಂತಹ ಕೆಲಸಕ್ಕೆ ಕೈಹಾಕುವುದಿಲ್ಲ. ಏಕೆಂದರೆ ಈ ಕಂಟ್ರಿ ಟೌನ್‌ಪ್ಲಾನಿಂಗ್ ಆಕ್ಟನ್ನು ತಂದಿರುವ ಉದ್ದೇಶ ಏನು ? ಮೈಸೂರಿನ ಮಹಾರಾಜರು ಆ ಕಾಲದಲ್ಲಿ ನಗರವನ್ನು ಬೆಳಸತಕ್ಕ ಸಂದರ್ಭದಲ್ಲಿ ಆ ರಸ್ತೆಗಳನ್ನು ಆ ಸರ್ಕಲ್‌ಗಳನ್ನು ಅಷ್ಟೊಂದು ಅಂದವಾಗಿ ಆಯಕಟ್ಟಿನಿಂದ ಕಟ್ಟಿದ್ದಾರೆ. ಬ್ರಿಟಿಷರ ಆರ್ಕಿಟೆಕ್ಟ್‌ನ್ನು ಕರೆಸಿಕೊಂಡು ಅವರ ನಿರ್ದೇಶನದ ಪ್ರಕಾರ ಕಟ್ಟಿದ್ದಾರೆ. ನಮ್ಮ ದೆಹಲಿಯನ್ನು ಕಟ್ಟಿದ್ದಾರೆ. ಅವರೂ ಕೂಡ ನಮ್ಮ ದೇಶದವರಲ್ಲ ಆ ಕಾಲದಲ್ಲಿ ಅಲ್ಲಿಂದ ಆರ್ಕಿಟೆಕ್ಟ್‌ಗಳನ್ನು ಕರೆಸಿಕೊಂಡು ಡಿಸೈನ್ ಮಾಡಿ ಕಟ್ಟಿದ್ದಾರೆ. ಇದರ ಉದ್ದೇಶವೇನು ? ನಾವು ಹೊಸ ಯುಗಕ್ಕೆ ಹೋಗುತ್ತಿದ್ದೇವೆ. ಹೊಸ ನಾಗರೀಕತೆಗೆ ಹೋಗುತ್ತಿದ್ದೇವೆ. ಆ ಹೊಸ ನಾಗರೀಕತೆಗೆ ಬೇಕಾದ ರೀತಿಯಲ್ಲಿ ನಾವು ನಮ್ಮ ನಗರಗಳನ್ನು ಹಳ್ಳಿಗಳನ್ನು ಕಟ್ಟಬೇಕೆನ್ನತಕ್ಕ fore-thought, vision they had,

Vishweshwaraiah had. ಆ ಕಾರಣಕ್ಕಾಗಿ ನಮ್ಮಲ್ಲಿ ಇನ್ನು ಕೆಲವು ನಮ್ಮಲ್ಲಿ ವ್ಯವಸ್ಥೆ ಉಳಿದುಕೊಂಡಿವೆ. ಇನ್‌ಫ್ರಾಸ್ಟ್ರಕ್ಚರ್ ಎಂದು ಏನು ಹೇಳುತ್ತೇವೆ ಅದು ಉಳಿದುಕೊಂಡಿದೆ. ಕೆಂಪೇಗೌಡರೂ ಕೂಡ ಈ ಬೆಂಗಳೂರು ನಗರವನ್ನು ಕಟ್ಟಿಸಿದರು. ಅವರು ಕೂಡ ಬೌಂಡರಿ ಫಿಕ್ಸ್ ಮಾಡಿದ್ದರು. ಅವು ಈಗಲೂ ಇದಾವೆ ತಾನೇ. He had that vision that Bangalore should not develop beyond that region, because ಅದಕ್ಕಿಂತ ಮೇಲೆ ಹೋದರೆ ಅಪಾಯವಿರುತ್ತದೆ ಬೆಂಗಳೂರಿನ ಸೌಂದರ್ಯ ಹಾಳಾಗುತ್ತದೆ ನಾಗರೀಕತೆಗೆ ಸೌಲಭ್ಯಗಳು ಸಿಗುವುದಿಲ್ಲ ಎನ್ನತಕ್ಕ long-standing vision, he had at that time. ಅವನೇನೂ ನಮ್ಮ ಹಾಗೆ ಆಕ್ಸ್‌ಫರ್ಡ್ ಯೂನಿವರ್ಸಿಟಿಯ ಗ್ರ್ಯಾಜ್ಯುಯೇಟ್ ಆಗಿರಲಿಲ್ಲ. ಅಥವಾ ಯೂನಿವರ್ಸಿಟಿಯಲ್ಲಿ ಓದಿದವನಲ್ಲ. ಕೇವಲ ಪ್ರಜ್ಞೆ ಆಲೋಚನೆ ಮತ್ತು ವಿಚಾರ ಮಾಡತಕ್ಕ ಒಬ್ಬ ಮನುಷ್ಯನ ಹೃದಯದಿಂದ ಮೂಡಿ ಬರತಕ್ಕ ಚಿಂತನೆಗಳಿಂದಾಗಿ ಆ ಹಿರಿಯರು ಆ ಕಾಲದಲ್ಲಿ ಇದನ್ನೆಲ್ಲಾ ಮಾಡಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು 1961 ನೇ ಇಸವಿಯಲ್ಲಿ ಇಂತಹ ಒಂದು ಕಾನೂನನ್ನು ತಂದು ಕರ್ನಾಟಕ ರಾಜ್ಯದಲ್ಲಿ ಇದೊಂದೇ ಅಲ್ಲ. ಇಡೀ ನಮ್ಮ ರಾಷ್ಟ್ರದಲ್ಲಿಯೇ ಕೂಡ ನಮ್ಮ ನಗರಗಳನ್ನು ನಾವು ಇನ್ನು ಮುಂದಾದರೂ ಬೆಳಸಬೇಕಾದರೆ ಅವುಗಳಿಗೆ ಮುಂದಿನ ಭವಿಷ್ಯದ ದೃಷ್ಟಿಯಿಂದ ಮುಂದಿನ ಜನಾಂಗದ ನಾಗರೀಕ ದೃಷ್ಟಿಯಿಂದ ಅದಕ್ಕೆ ಬೇಕಾದ ಎಲ್ಲಾ ಅನುಕೂಲತೆಗಳು ಲಭ್ಯವಾಗಬೇಕೆನ್ನುವ ಕಾರಣಕ್ಕಾಗಿ ಆ ಕಾನೂನನ್ನು ತಂದು ಜೋನಲ್ ರೆಗ್ಯುಲರೈಸೇಷನ್ ಆಕ್ಟ್ ಇದನ್ನೆಲ್ಲಾ ತಂದಿದ್ದಾರೆ. ಅದರ ಪ್ರಕಾರವಾಗಿ ನೂರಕ್ಕೆ ನೂರು ನಡೆಯದಿದ್ದರೂ ಕೂಡ ಒಳ್ಳೆಯ ಅಧಿಕಾರಿ ಕೆಲಸ ಮಾಡತಕ್ಕ ಸಂದರ್ಭದಲ್ಲಿ ಆಡಳಿತವನ್ನು ಒಳ್ಳೆಯದು ಕೊಡತಕ್ಕ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಅದನ್ನು ಪರಿಪಾಲನೆ ಮಾಡಿಕೊಂಡು ಬಂದಿದ್ದಾರೆ. ಎಲ್ಲಿ ಆಡಳಿತ ಜವಾಬ್ದಾರಿಯನ್ನು ಹೊತ್ತಂತಹವರು ಆ ಕಡೆಗೆ ಲಕ್ಷ್ಯ ಕೊಡಲಿಲ್ಲ ಅಂತಹ ಕಡೆಗಳಲ್ಲಿ ಬೇಕಾದ ರೀತಿಯಲ್ಲಿ ದನ ಹೊಲ ಮೇಯ್ದ ಹಾಗೆ ಮೇಯುವುದಕ್ಕೆ ಶುರುವಾಗಿಬಿಟ್ಟಿದೆ. ಈಗ ಹಿಡಿದು ನಿಲ್ಲಿಸತಕ್ಕ ಕೆಲಸ ಈ ಸರ್ಕಾರದ್ದು ಆಗಿದೆ. ಮಾನ್ಯ ಬಚ್ಚೇಗೌಡರು ಏಕೆ ಇದರೊಳಗೆ ಹೋಗಿ ಸಿಕ್ಕಿಹಾಕಿ ಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಈಗ ಅವರು ಈಚೆಗೆ ಬಂದುಬಿಟ್ಟರು. ಈ ಪಾಪದ ಕೊಡವನ್ನು ನಾನು ಏಕೆ ತಲೆಯ ಮೇಲೆ ಹೊತ್ತುಕೊಂಡು ಹೋಗಬೇಕೆಂದು ಹೇಳಿ ಈಚೆಗೆ ಬಂದು ಕುಳಿತಿದ್ದಾರೆ. ಮಾನ್ಯ ಎಂ.ಎಸ್. ಪಾಟೀಲರು ಮೊದಲು ಜವಳಿ ಇತ್ತು ಅದನ್ನು ಇಟ್ಟುಕೊಂಡು ಕುಳಿತುಕೊಳ್ಳಬೇಕಾಗಿತ್ತು. ನೀವು ಹೋಗಿ ಹೋಗಿ ಈ ಪಾಪದ ಕೊಡವನ್ನು ತಲೆಯ ಮೇಲೆ ಹಾಕಿಕೊಳ್ಳುವುದಕ್ಕೆ ಹೊರಟಿದ್ದೀರಲ್ಲಾ. ಇದು ಯಾರೂ ಮೆಚ್ಚತಕ್ಕದ್ದಲ್ಲ. ಹಾಗೆ ಇದ್ದರೆ ಈ ಕಂಟ್ರಿ ಟೌನ್ ಪ್ಲಾನಿಂಗ್ ಆಕ್ಟನ್ನು ರೀಪಿಲ್ ಮಾಡಿಬಿಡಿ. ಅದನ್ನು ವಾಪಸ್ಸು ತೆಗೆದುಬಿಡಿ. ಅದು ಇರಬೇಕಾದ ಅಗತ್ಯವಿಲ್ಲ. ಕಾನೂನು ಮಾಡಿಕೊಂಡಿದ್ದೇವೆ ಡಿವಿಯೇಷನ್ ಮಾಡಿಕೊಳ್ಳುವುದು ಪ್ಲಾನ್ ಹೀಗೆ ಇರಬೇಕು ಇಷ್ಟೇ ಫ್ಲೋರ್‌ನಡಿ ಇರಬೇಕು ಇಷ್ಟೇ ರಸ್ತೆ ಇರಬೇಕು ಎಂದೆಲ್ಲ ಇದೆ. ಅದನ್ನು ಎನ್‌ಫೋರ್ಸ್ ಮಾಡಬೇಕು, ಇಂಪ್ಲಿಮೆಂಟ್ ಮಾಡಬೇಕು ಇನ್ನಷ್ಟು ಬಲಯುತವಾಗಿ ಇನ್ನಷ್ಟು ಪ್ರಾಮಾಣಿಕವಾಗಿ ಅದನ್ನು ಜಾರಿಗೆ ಕೊಡಬೇಕು. ಯಾರ್‍ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳಬೇಕೆನ್ನತಕ್ಕ ನಿಷ್ಠೆ ಪ್ರಾಮಾಣಿಕತನ ಇವತ್ತು ಇರಬೇಕಾದ ಸಂದರ್ಭದಲ್ಲಿ ಮಾಡಿದ

ತಪ್ಪನ್ನೆಲ್ಲಾ ಇವತ್ತು ಮುಚ್ಚಿಕೊಳ್ಳುವುದಕ್ಕೆ ಹೋದರೆ ಅದು ಯಾರಿಗೆ ಫಾಯಿದೆ? ಯಾರು ಬಂದಿದ್ದರು? ಯಾವ ನಾಗರೀಕರು ಬಂದಿದ್ದರು? ನಿಮಗೆ ಯಾರು ಮನವಿ ಕೊಟ್ಟಿದ್ದರು? ಫೈವ್‌ಸ್ಟಾರ್ ಹೋಟೆಲ್‌ನವರು ಮಾಡಿದ ಕಿತಾಪತಿ ಅಲ್ಲ. ಹೋಟೆಲ್ ಹಾಲಿಡೆ ಇನ್ ಇದೆಯಲ್ಲಾ, ಅದಕ್ಕೆ ಪರ್ಮಿಶನ್ ಕೊಟ್ಟಿದ್ದೀರಲ್ಲಾ ಅದಕ್ಕೆ ರಸ್ತೆ ಇತ್ತಾ? ಅದಕ್ಕೆ ಪರ್ಮಿಶನ್ ಕೊಡಬೇಕಾದರೆ ಗಾಲ್ಫ್ ಗ್ರೌಂಡ್‌ನಲ್ಲಿ ಜಮೀನನ್ನು ಅಕ್ವೈರ್ ಮಾಡಿ ರೋಡ್‌ಗೆ ಕೊಡುತ್ತೇವೆ ಎನ್ನತಕ್ಕ ಶರತ್ತು ಇದೆ. ಅದನ್ನು ಇವತ್ತಿನವರೆಗೂ ಮಾಡಿದಿರಾ? ಅದನ್ನು ಮಾಡಬೇಕಾದರೆ ಪುಕ್ಕಟೆ ಕೊಟ್ಟಿರಾ? ಅವನು ಏನು ನಿಮ್ಮ ಮಾವನಾ? ನಿಮ್ಮ ಬೀಗನಾ? ನಿಮ್ಮ ನೆಂಟನಾ? ಓಟು ಕೊಟ್ಟವನಾ? ಏಕೆ ಕೊಟ್ಟಿರಿ ಅವನಿಗೆ? ಈಗಲೇ ತೆಗೆದು ನೋಡಿರಿ ಬೇಕಾದರೆ. ಅದನ್ನು ನೀವು ಈಗ ಮಾಡುತ್ತೀರಾ? ಮಲ್ಯಾ ಆಸ್ಪತ್ರೆ ಮಾಡಿ ಮಾಡಬಾರದ ಅನ್ಯಾಯ ಮಾಡಿದ್ದೀರಿ. ಇದೇ ಸದನದಲ್ಲಿ ಉತ್ತರ ಕೊಟ್ಟಿದ್ದಾರೆ. ಇವತ್ತು ನಾವು ಪಾರ್ಕಿಂಗ್ ಮಾಡುವುದಕ್ಕೆ ಆಗುತ್ತದಾ? ಏನು ಮಾಡಬೇಕೋ ಅದನ್ನು ಮಾಡದೆ ಬೇರೆ ಉದ್ದೇಶಕ್ಕೆ ಉಪಯೋಗ ಮಾಡಿಕೊಂಡು ಸ್ಟೇಡಿಯಂ ನೀವು ಮಾಡಿ ಇಟ್ಟಿದ್ದೀರಾ? ಯಾರು ಆಕ್ಟ್ ಮಾಡಿದ್ದು? ನಮ್ಮ ಹಣೆಯ ಬರಹಕ್ಕೆ ಇಂತಹ ಒಂದು ಸ್ಟೇಡಿಯಂ ಮಾಡುವುದಕ್ಕಾಗುತ್ತದೆಯಾ ? ಜಾಗ ಸಿಗುತ್ತದೆಯೇ? ಯಾರೋ ಪುಣ್ಯಾತ್ಮರು ಮಾಡಿ ಇಟ್ಟುಹೋಗಿದ್ದಾರೆ. ಅದನ್ನು ಉಳಿಸಿಕೊಳ್ಳೋಣ ಮುಂದಿನ ಭವಿಷ್ಯಕ್ಕೆ ಮುಂದಿನ ಮಕ್ಕಳಿಗೆ ಮುಂದಿನ ಜನರಿಗೆ ಆ ಸೌಲಭ್ಯ ಉಳಿಯಬೇಕೆನ್ನತಕ್ಕ ರೀತಿಯಲ್ಲಿ ಮಾಡುವುದನ್ನು ಬಿಟ್ಟು ಇಲ್ಲದ್ದನ್ನೆಲ್ಲಾ ಕತೆನೆಪ ಹೇಳಿಕೊಂಡು ಅವರಿಗೆ ಕೊಟ್ಟು ಯಾರದೋ ಹೆಸರಿನಲ್ಲಿ ಪಾರ್ಕ್ ಮಾಡಿದ್ದೀರಲ್ಲಾ, ನಿಮಗೆ ಶಾಪ ತಗಲುವುದಿಲ್ಲವೇನು?

4.50 ಪಿ.ಎಂ.

ನಮ್ಮ ನಿಮ್ಮ ಯೋಗ್ಯತೆಗೆ ಇಂತಹ ಕಬ್ಬನ್ ಪಾರ್ಕ್ ಮಾಡುವುದಕ್ಕಾಗುತ್ತದೆಯೇ? ನಾವು ಇವತ್ತು ಇರಬಹುದು, ನಾಳೆ ಸತ್ತು ಹೋಗುತ್ತೇವೆ. ಆದರೆ, ಮುಂದಿನ ಭವಿಷ್ಯದಲ್ಲಿ ನಿಮ್ಮನ್ನು ನೋಡುತ್ತಾರಲ್ಲಾ ; ಅವರಿಗೆ ಏನು ಹೇಳುತ್ತೀರಿ? ಅವರಿಂದ ಶಾಪ ಹಾಕಿಸಿಕೊಳ್ಳುತ್ತೀರಾ? ಇವತ್ತು ನಿರ್ದಾಕ್ಷಿಣ್ಯವಾಗಿ ತೆಗೆದು ಬಿಸಾಕುವುದನ್ನು ಬಿಟ್ಟು, ಅದಕ್ಕೆ ಒಂದು ಕಾನೂನು ತಂದಿದ್ದೀರಿ. ಆಡುವ ಮಕ್ಕಳು ಹೇಳುತ್ತಾರೆ, ಈ ಹಂತದಲ್ಲಿ ಈ ಕಾನೂನು ಏಕೆ ತಂದಿದ್ದಾರೆ, ಯಾರ ಉದ್ಧಾರಕ್ಕೋಸ್ಕರ ತಂದಿದ್ದಾರೆ ಎಂದು? ಯಾರೋ ಫೈವ್ ಸ್ಟಾರ್ ಹೋಟೆಲಿನವರು, ಯಾರೋ ಬಂಡವಾಳಶಾಹಿಗಳು, ಹಣ ಕೊಡುವಂತಹವರು, ಅವರಿಗೆ ಅನುಕೂಲ ಮಾಡುವ ಸಲುವಾಗಿ ಇಂತಹ ಕಾನೂನನ್ನು ತಂದು.....

ಶ್ರೀ ಜೆ.ಸಿ. ಮಾಧುಸ್ವಾಮಿ : ಈ ಬಿಲ್ಲುಗಳನ್ನು ಏನಾದರೂ ಲೆಜಿಸ್ಲೇಚರ್ ಪಾರ್ಟಿಯಲ್ಲಿ ಇಟ್ಟಿದ್ದಾರಾ, ಇದರ ಬಗ್ಗೆ ಶಾಸಕರುಗಳ ಅಭಿಪ್ರಾಯವೇನೆಂದು ನಮಗೆ ಒಂದೂ ಅರ್ಥವಾಗುತ್ತಿಲ್ಲ. ರೂಲಿಂಗ್ ಪಾರ್ಟಿ ಎಂ.ಎಲ್.ಎ. ಗಳಿಗೆ ಇದರಲ್ಲೇನಾದರೂ ಆಸಕ್ತಿ ಇದೆಯೇ, ಯಾರಾದರೂ ಇದನ್ನು ಓದಿದ್ದಾರೆಯೇ, ಇದರ ವಿಚಾರದಲ್ಲಿ ಯಾರಾದರೂ ಮಾತನಾಡುತ್ತಾರೆಂದು ಎರಡು ದಿವಸದಿಂದ ನೋಡುತ್ತಾ ಇದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಅವರಿಗೆ ಗೊತ್ತಿದೆಯೋ ಇಲ್ಲವೋ ಅದು ನನಗೆ ಗೊತ್ತಿಲ್ಲ.

ಏನಾಗಿದೆ ಎಂದರೆ, ಈ ಸದನವೊಂದನ್ನು ಪೂರೈಸಿಬಿಟ್ಟರೆ, ಇನ್ನೊಂದು ಚುನಾವಣೆಗೆ ಏನೂ ತೊಂದರೆ ಇಲ್ಲ. ನಿಮಗೆ ಹೇಗೆ ಬೇಕಾದರೂ ನಡೆದುಕೊಳ್ಳಿ. ಅವರಲ್ಲಿಯೂ ಕೂಡ ಯಾರದ್ದೂ ತಂಟೆತಕರಾರು ಇಲ್ಲ, ಯಾರೂ ಒದರುವುದಿಲ್ಲ. ಕೆದರುವುದಿಲ್ಲ, ಆರಾಮವಾಗಿದೆ. ಈ ರೀತಿಯಾಗಿ ಗಾಡಿ ಹೊಡೆಯುತ್ತಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಪಾಪ, ಆ ಶಾಸಕರುಗಳಿಗೆ ಗೊತ್ತೇ ಇಲ್ಲ, ಪಾರ್ಟಿ ಮೀಟಿಂಗ್‌ನಲ್ಲಿ ಇದನ್ನೂ ತಂದೂ ಇಲ್ಲ, ಅವರು ನೋಡಿಯೂ ಇಲ್ಲ. ಸುಮ್ಮನೆ ಆ ಎಂ.ಎಲ್.ಎ.ಗಳ ಮೇಲೆ ಏಕೆ ಹೇಳಬೇಕು, ಅವರಿಗೆ ಏನೂ ಗೊತ್ತಿಲ್ಲ.

ಶ್ರೀ ಬಿ.ಎನ್.ಬಚ್ಚೇಗೌಡ : ನೀವು ಮಂತ್ರಿಯಾಗಿದ್ದವರು ಮತ್ತು ಶಾಸಕರಾಗಿದ್ದವರು ಹಿಂದಿನವರ ಪಾಪದ ಕೊಡವನ್ನು ನಾವು ಸರಿ ಮಾಡುತ್ತಿದ್ದೇವೆ. ನೀವು ನಮಗೆ ಪಾಪದ ಕೊಡ ಎಂದು ಹೇಳಬೇಡಿ. 1992 ರಿಂದ ಏನಾಗಿದೆ ಅದನ್ನು ಸರಿಪಡಿಸುವಂಥ, ತಿದ್ದುಪಡಿಗಳನ್ನು ತಂದಿದ್ದೇವೆ. ಇದು ಇವತ್ತಿನ ಪಾಪ ಅಲ್ಲ. ಇದು ನಾವು ಮಾಡಿರುವುದಲ್ಲ. ಇದಕ್ಕೆ ರೆಟ್ರಾಸ್ಪೆಕ್ಟೀವ್ ಎಫೆಕ್ಟೀವ್ ಕೊಟ್ಟು, ಅದನ್ನು ರೆಗ್ಯುಲರೈಸ್ ಮಾಡಿ, ದೇಶಕ್ಕೆ ರೆವಿನ್ಯೂ ಬರಲಿ ಎಂದು ಮಾಡುವಂಥ ಕಾರ್ಯ ಇದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರು ಮಾಡಿದ್ದೂ ತಪ್ಪು, ನೀವು ಮಾಡಿದ್ದೂ ತಪ್ಪು, ಅದನ್ನು ನಾವು ಒಪ್ಪುತ್ತೇವೆ. ಅದಕ್ಕೆ "ಎರಡೂ ದದ್ದ ಹೊರಕ್ಕೆ ಹಾಕು" ಎಂದು ನಾವು ಹೇಳುವುದು.

ಶ್ರೀ ಬಿ.ಎನ್. ಬಚ್ಚೇಗೌಡ : ನೀವು ಹೀಗೆ ಹೇಳಿಕೊಂಡೇ ಇರಬೇಕು ಅಷ್ಟೆ.

ಶ್ರೀ ಕಾಗೋಡು ತಿಮ್ಮಪ್ಪ : ಈ ಕಾನೂನು 1961ನೇ ಇಸವಿಯಲ್ಲಿ ಬಂತು. ಆವತ್ತಿನಿಂದ ಯಥಾರ್ಥವಾಗಿದೆಯೆಂದು ಇದನ್ನು ಕಾರ್ಯರೂಪ ಮಾಡಿಬಿಟ್ಟಿದ್ದರೆ, ಡೀವಿಯೇಷನ್ ಮಾಡತಕ್ಕ ಪ್ರಶ್ನೆ ಇಲ್ಲ. ಈಗ ನೀವು ಬಂದಾದ ಮೇಲೆ ಡೀವಿಯೇಷನ್ ಆಗಿದೆ, ಹಿಂದೆ ಆಗಿಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಹಿಂದಿನ ಸರ್ಕಾರಗಳು ಎಂದರೆ, ಯಾರು ಎಂದು ನಾನು ಹೇಳುವುದಿಲ್ಲ. ಏಕೆಂದರೆ, ಹಿಂದಿದ್ದ ಕೆಲವು ಸರ್ಕಾರಗಳೂ ಮಾಡಿದವು. ನನ್ನ ನೆನಪಿಗೆ ಇದ್ದುದನ್ನು ಹೇಳುತ್ತೇನೆ. ಹಾಲಿಡೇ ಇನ್ ಹೋಟೆಲ್ ಕಟ್ಟಿದ್ದು ಯಾರಿದ್ದಾಗ? ಮಲ್ಯ ಹಾಸ್ಪಿಟಲ್ ಕಟ್ಟಿದ್ದು ಯಾರಿದ್ದಾಗ? ಹೀಗೆ ನನ್ನ ನೆನಪಿಗೆ ಇದ್ದುದನ್ನು ಸ್ಯಾಂಪಲ್‌ಗೆ ನಿಮ್ಮ ಗಮನಕ್ಕೆ ತಂದಿದ್ದೇನೆ. ಈ ಕಾನೂನಿನಲ್ಲಿ ಇಂತಹ ತಾರೀಖಿನೊಳಗೆ ಆಗಿರುವಂಥವುಗಳು ಎನ್ನುವುದರ ಬಗ್ಗೆ ಏನಾದರೂ ನೀವು ಹೇಳಿದ್ದೀರಾ? 1961ನೇ ಇಸವಿಯಲ್ಲಿ ಈ ಕಾನೂನು ಬಂದ ಲಾಗಾಯ್ತು, ಈ ತಾರೀಖಿನವರೆಗೆ ಎಲ್ಲೆಲ್ಲಿ ಡೀವಿಯೇಷನ್ ಆಗಿವೆ, ಅವೆಲ್ಲವನ್ನೂ ರೆಗ್ಯುಲರೈಸ್ ಮಾಡುವುದಕ್ಕೋಸ್ಕರ ಈಗ ತಂದಿರುವುದು. ಈ ರೀತಿ ತರುವುದರ ಜೊತೆಗೆ, ಈ ಕಾನೂನು ಹಾಗೆಯೇ ಇರುತ್ತದಲ್ಲಾ. ಇದು ಒನ್ ಟೈಮ್ ಆಪರೇಷನ್ ಅಲ್ಲ. ನೀವೇನಾದರೂ ಈ ತಾರೀಖಿನಿಂದ ಈ ತಾರೀಖಿನವರೆಗೆ ಆಗಿರತಕ್ಕ ಡೀವಿಯೇಷನ್‌ಗೆ, ಕಟ್ ಆಫ್ ಡೇಟ್ ಇದ್ದು ಮಾಡಿದ್ದರೆ, ಹೌದು ಇಂತಹವರ ಕಾಲದಲ್ಲಿ ಆಗಿತ್ತು, ಅವರು ಮಾಡಿರುವ ಪಾಪವನ್ನು ನಾವೇಕೆ ಹೊತ್ತುಕೊಳ್ಳಬೇಕೆಂದು ಮಾಡಿದ್ದೇವೆ ಎಂದು ಹೇಳಿದ್ದರೆ ಅದನ್ನಾದರೂ ಒಪ್ಪಬಹುದಿತ್ತು. ಆದರೆ, ಏನೂ ಇಲ್ಲ. ಯಾವತ್ತಿನಿಂದ ಡೀವಿಯೇಷನ್ ಆಗಿದ್ದರ

ಬಗ್ಗೆಯೂ ಇಲ್ಲ. ಯಾವತ್ತಿಗೆ ಅಂತಿಮ ಎಂಬುದೂ ಇಲ್ಲ. ಇದೇ ಒನ್ ಟೈಮ್ ಆಪರೇಷನ್, ಮುಂದೆ ಆಗುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದೂ ಹೇಳುತ್ತಿಲ್ಲ. ಹಾಗಿದ್ದಮೇಲೆ ಈ ಕಾನೂನಿನ ಅವಶ್ಯಕತೆ ಏನು?

ಶ್ರೀ ಸಿ.ಆರ್. ಸಗೀರ್ ಅಹಮದ್ : ಈ ಮಸೂದೆ ಮಂಡನೆಯಾದ ಮೇಲೆ, ನಗರಾಭಿವೃದ್ಧಿ ಪ್ರಾಧಿಕಾರದಿಂದಲಾಗಲೀ, ನಗರ ಸಭೆ, ಪುರಸಭೆಯಿಂದಾಗಲೀ ಯಾವುದೇ ಕಟ್ಟಡವನ್ನು ನಿರ್ಮಿಸಬೇಕಾದಂಥ ಸಂದರ್ಭದಲ್ಲಿ, ಪರವಾನಗಿಯನ್ನು ಪಡೆಯುವಂಥ ಅಗತ್ಯ ಇದೆಯೇ? ನೂರಕ್ಕೆ ನೂರು ಡೀವಿಯೇಟ್ ಆಗಿದೆ ಎನ್ನುವ ವಿಚಾರ ಬಂದಾಗ ಯಾವುದೇ ಅನುಮತಿ ಅಗತ್ಯ ಇಲ್ಲ. ಈ ಮಸೂದೆ ಪ್ರಕಾರ ನೇರವಾಗಿ ಕಟ್ಟಡ ಕಟ್ಟುತ್ತಾನೆ, ನೂರು ಪರ್ಸೆಂಟ್ ಡೀವಿಯೇಟ್ ಆಗಿದೆ ಎಂದು ಹೇಳುತ್ತಾನೆ, ಪೆನಾಲ್ಟಿ ಹಾಕುತ್ತಾರೆ, ರೆಗ್ಯುಲರೈಸ್ ಮಾಡುತ್ತಾರೆ. ಏಕೆಂದರೆ, ಈಗ ವಿಧಾನ ಸೌಧದ ಪಕ್ಕದಲ್ಲಿ ಒಂದು ಪೆಟ್ಟಿಗೆ ಅಂಗಡಿ ಇಟ್ಟು, ರೆಗ್ಯುಲರೈಸೇಷನ್‌ಗೆ ಹಾಕಿದರೂ ಇವರು ಮಾಡುತ್ತಾರೆ, ಇದು ಅಂತಹ ಮಸೂದೆ. ಏಕೆಂದರೆ, ಇವರು ಮಾಡಲೇಬೇಕಾಗುತ್ತದೆ. ಈ ಮಸೂದೆ ಪ್ರಕಾರ ಅವನು ಪೆಟ್ಟಿಗೆ ಅಂಗಡಿ ಇಟ್ಟು, ನಾನು ಇಲ್ಲಿ ವಾಸಿಸುತ್ತಿದ್ದೇನೆ, ಎನ್‌ಕ್ರೋಚ್‌ಮೆಂಟ್ ಮಾಡಿದ್ದೇನೆ. ಆದುದರಿಂದ ಇದನ್ನು ರೆಗ್ಯುಲರೈಸ್ ಮಾಡಿಕೊಡಬೇಕೆನ್ನುವುದಾದರೆ, ಸರ್ಕಾರದವರು ಈ ಮಸೂದೆ ಪ್ರಕಾರ ಮಾಡಬೇಕಾಗುತ್ತದೆ.

ಶ್ರೀ ಎಸ್. ರಾಜೇಂದ್ರನ್ : ಎನ್‌ಕ್ರೋಚ್ ಮಾಡಿರುವುದನ್ನು ಒಡೆಯಬಾರದು, ಅನ್ಯಾಯ ಎಂದು ಹೇಳಿದರೆ ಸರ್ಕಾರದಿಂದ ಜನರಿಗೆ ಎಲ್ಲಿ ನ್ಯಾಯ ಸಿಕ್ಕುತ್ತದೆ.?

ಶ್ರೀ ಕಾಗೋಡು ತಿಮ್ಮಪ್ಪ : ಈ ರೀತಿಯಾದಂಥ ಯಾವುದೇ ಅರ್ಥವಿಲ್ಲದ, ಯಾವುದೇ ಗಡಿ, ಮಿತಿ ಇಲ್ಲದ, ಗೊತ್ತುಗುರಿ ಇಲ್ಲದ ಕಾನೂನನ್ನು ತಂದು ಮುಂದೆಯೂ ನಿರಂತರವಾಗಿ ಈ ಕಾನೂನಿನ ವ್ಯಾಪ್ತಿಯನ್ನು ಉಳಿಸಿಕೊಂಡು ಬಂದರೆ, ಈ ಕಾನೂನನ್ನು ಇಟ್ಟುಕೊಳ್ಳಬೇಕಾದ ಅಗತ್ಯ ಇಲ್ಲ. ಏಕೆಂದರೆ, ಇದು ಕೇವಲ ಬೆಂಗಳೂರು ಒಂದೇ ಅಲ್ಲ, ಇವತ್ತು ಎಲ್ಲಾ ಭಾಗದಲ್ಲೂ ಕೂಡ ಸಣ್ಣ ಟೌನ್ ಬಂತು, ಸಣ್ಣ ಪುರಸಭೆಗಳು ಬಂತು ಎಲ್ಲಾ ಕಡೆಗಳಲ್ಲೂ ಕೂಡ ಇವತ್ತು ವ್ಯಾಪಕವಾಗಿ ಬೆಳೆಯುತ್ತಿವೆ. ನಮ್ಮ ಸಾಗರದಲ್ಲಿಯೂ ಕೂಡ ಇದು ಆಗುತ್ತಿದೆ, ನಾವು ನೋಡಿದ್ದೇವೆ. ಪ್ರೈವೇಟ್ ಲೇಔಟ್‌ಗೆ ಕೊಟ್ಟು, ಕೊಟ್ಟು ಎಲ್ಲಿಯೂ ಸೈಟು ಸಿಗುವ ಹಾಗೆ ಇಲ್ಲ. ರಸ್ತೆ ಇಲ್ಲ, ಯಾವ ದೀಪ ಇಲ್ಲ, ಯಾವುದೂ ಇಲ್ಲ. ಕಾನೂನು, ಸರ್ಕಾರ ಏನೂ ಇಲ್ಲ. ಇವತ್ತು ದಿವಾಳಿ ಎದ್ದು ಯಾವ ಊರಿನಲ್ಲೂ ಏನೂ ಮಾಡುವ ಸ್ಥಿತಿ ಇಲ್ಲ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ. ಮಾನ್ಯ ಬಚ್ಚೇಗೌಡರೇ ನೀವೆಲ್ಲಾ ಇದ್ದೀರಿ ಇವತ್ತು. ವೆಹಿಕಲ್‌ಗಳು ಎಷ್ಟು ಜಾಸ್ತಿಯಾಗಿವೆ, ಹೇಳಿ ನೋಡೋಣ. ವರ್ಕ್ ಆಗಿದೆ, ಹಾಗೆಯೇ ಜನಸಂಖ್ಯೆ ಬೆಳೆಯುತ್ತಲೇ ಇರುತ್ತದೆ. ಅದು ಬೇರೆ ವಿಚಾರ. ಆದರೆ, ಇವತ್ತು ವಾಹನಗಳ ಸಂಖ್ಯೆ ಎಷ್ಟು ಜಾಸ್ತಿಯಾಗಿದೆ? ಯಾವುದಾದರೂ ಊರಿನಲ್ಲಿ, ಟೌನ್‌ನಲ್ಲಿ ಅಥವಾ ನಗರದಲ್ಲಿ ಇವತ್ತು ರಸ್ತೆಯಲ್ಲಿ ಓಡಾಡುವುದಕ್ಕಾಗುತ್ತದೆಯೇ? ಇವತ್ತು ಮಾನ್ಯ ಉದಾಸಿಯವರು ದಯವಿಟ್ಟು ಹೇಳಲಿ. ಅವರ ಊರು ಹಾನಗಲ್ ಮುಂಚೆ ಹೇಗಿತ್ತು, ಈಗ ಯಾವ ರೀತಿ ಇದೆ, ಆ

ರಸ್ತೆ ಸಾಕಾಗುತ್ತಾ ಇದೆಯೇ? 5 ಬಸ್ ಓಡಾಡತಕ್ಕ ರಸ್ತೆ ಯಲ್ಲಿ ಇವತ್ತು 50 ಬಸ್ಸುಗಳು ಓಡಾಡುತ್ತಿವೆ. ನಮ್ಮ ಊರಿನಲ್ಲಿ ಹಿಂದೆ 2 ಬಸ್ಸು ಓಡಾಡುತ್ತಿದ್ದವು, ಇವತ್ತು 10 ಬಸ್ ಓಡಾಡುತ್ತಿವೆ. ಒಂದು ಟೌನ್‌ನ ರಸ್ತೆಯಲ್ಲಿ 5 ಬಸ್ ಓಡಾಡುವ ಕಡೆಗಳಲ್ಲಿ, ಇವತ್ತು 50 ಬಸ್ ಓಡಾಡುತ್ತಿವೆ. ಎದುರುಗಡೆ ಒಂದು ಬಸ್ ಬಂದರೆ, ಈ ಕಡೆಗೂ ಹೋಗುವ ಹಾಗಿಲ್ಲ, ಆ ಕಡೆಗೂ ಹೋಗುವ ಹಾಗಿಲ್ಲ. ಈ ಸ್ಥಿತಿ ಇವತ್ತು ಬಂದುಬಿಟ್ಟಿದೆ. ಎಲ್ಲಾ ಊರುಗಳಲ್ಲೂ ಕೂಡ ಟ್ರಾಫಿಕ್ ಎಂದು ಹೇಳಿದರೆ, ಕಂಜೆಷನ್ ಆಗಿ ಬಹಳ ಇಕ್ಕಟ್ಟಾಗಿ ಜನಗಳು ಓಡಾಡುವುದಕ್ಕೆ ಆಗುತ್ತಾ ಇಲ್ಲ. ಈ ಪರಿಸ್ಥಿತಿ ಉಂಟಾಗಿ ಬಿಟ್ಟಿದೆ. ಇವತ್ತು ನೀವು ದೇಶ ತಿರುಗಿದ್ದೀರಿ, ಮಾನ್ಯ ಉದಾಸಿಯವರೇನೂ ಹೋಗಲಿಲ್ಲ. ನಮ್ಮ ಭೈರೇಗೌಡರು ಹೋಗಿ ಬಂದರು. 4-4 ಸಾರಿ ಚೈನಾಕ್ಕೆ ಹೋಗಿಬಂದರು. ನೀವು ಚೈನಾವನ್ನಾದರೂ ನೋಡಿ. ಇವತ್ತು ನಾವು ಯಾವ ಯುಗದಲ್ಲಿದ್ದೇವೆ, ಎಲ್ಲಿಗೆ ಹೋಗುತ್ತಿದ್ದೇವೆ. ನಮ್ಮ ರಾಷ್ಟ್ರನಿರ್ಮಾಣದ ಕಲ್ಪನೆಯಲ್ಲಿ ಭವಿಷ್ಯದ ಬಗ್ಗೆ ನಿರ್ದಿಷ್ಟವಾದ ಕಲ್ಪನೆಗಳು ಇಲ್ಲದೇ ಹೋದರೆ, ನಾವು ರಾಷ್ಟ್ರವನ್ನು ಕಟ್ಟುತ್ತೇವೆಯೇ, ಸಮಾಜವನ್ನು ಕಟ್ಟುತ್ತೇವೆಯೇ? ಕೆಲವು ನಿರ್ದಾಕ್ಷಿಣ್ಯವಾದ ತೀರ್ಮಾನ ಮಾಡಲೇಬೇಕಾಗುತ್ತದೆ. ಇವತ್ತು ಬೆಂಗಳೂರು ಒಂದರಲ್ಲೇ ಅಲ್ಲ. ಏನೋ ಪುಣ್ಯಾತ್ಮರು ಮಹಾತ್ಮಗಾಂಧಿ ರಸ್ತೆ ಮಾಡಿದ್ದಾರೆ, ಈಗ ಅದೂ ಕೂಡ ಸಾಕಾಗುತ್ತಾ ಇಲ್ಲ. ಅಂತಾದ್ದು ಒಂದೇ ಒಂದು ರಸ್ತೆ ಇರುವುದು. ಮತ್ತೊಂದು ರಸ್ತೆ ಲಕ್ಷ್ಮಣರಾಯರ ಕಾಲದಲ್ಲಿ ಜಯನಗರದಲ್ಲಿ ಮಾಡಿದ್ದಾರೆ. ಇದು ಬಿಟ್ಟರೆ, ನಾವು ಬೆಂಗಳೂರು ನಗರದಲ್ಲಿ ಬೇರೆ ಕಡೆಗಳಲ್ಲಿ ಅಂತಹ ರಸ್ತೆ ಮಾಡುವುದಕ್ಕಾಗಿದೆಯೇ? ಇವತ್ತು ಶಿವಣ್ಣನವರು ಇಲ್ಲಿಯೇ ಇದ್ದಾರೆ, ದಾವಣಗೆರೆಯನ್ನು ಇವತ್ತು ಒಡೆಯುತ್ತಾ ಇದ್ದೇವೆ. ದಾವಣಗೆರೆ ಎಷ್ಟು ಬೆಳೆದುಬಿಟ್ಟಿದೆ. ಎಷ್ಟು ಜನಸಂಖ್ಯೆ, ಎಷ್ಟು ವಾಹನ, ಎಷ್ಟು ವ್ಯವಹಾರ, ಎಷ್ಟು ವಹಿವಾಟುಗಳು. ಇದಕ್ಕೆ ಸರಿಯಾಗಿ ಮಾಡದೇ ಮುಂದಿನ 50 ವರ್ಷಗಳಲ್ಲಿ ಯಾವ ಸ್ಥಿತಿಯಲ್ಲಿರುತ್ತೇವೆ ಎಂಬುದನ್ನು ನಿರೀಕ್ಷೆ ಮಾಡುವುದು ಬೇಡವೇ? ಈ ಕಾನೂನನ್ನು ನೀವು ಇನ್ನಷ್ಟು ಬಿಗಿ ಮಾಡುವ ಬದಲಾಗಿ, ಇನ್ನು ನೂರಲ್ಲ, ಇನ್ನೂರು ವರ್ಷಕ್ಕೆ ಅಗತ್ಯಕ್ಕೆ ಅನುಗುಣವಾಗಿ ಬೇಕಾದಂಥ ಸೌಲಭ್ಯಗಳನ್ನು, ಸೌಕರ್ಯಗಳನ್ನು ಒದಗಿಸಿಕೊಡುವ ದೃಷ್ಟಿಯಿಂದ, ನಮ್ಮ ಕಾನೂನಿಗೆ ಸರಿಯಾದಂಥ ತಿದ್ದುಪಡಿ ತಂದು, ಪ್ರಗತಿಪರವಾದ ದೃಷ್ಟಿಯನ್ನು, ಮಾರ್ಗವನ್ನು ನಾವು ತುಳಿಯುವ ಬದಲಾಗಿ, ನಾವು ಹಿಂದಕ್ಕೆ ಹೋಗುತ್ತೇವೆಂದು ಹೇಳಿದರೆ, ನಾವೆಲ್ಲಾ ತಲೆತಗ್ಗಿಸಬೇಕು. ನಿಜವಾಗಿಯೂ ಕಾಲಕ್ಕೆ ಸರಿಯಾಗಿ ವರ್ತಿಸುತ್ತಾ ಇಲ್ಲ. ಪ್ರಜ್ಞಾಹೀನರಾಗಿದ್ದೇವೆ. ಇದೇ ರೀತಿ ಮುಂದುವರೆದರೆ, ಚರಿತ್ರೆಯಲ್ಲಿ ಅತ್ಯಂತ ಕಳಂಕಹೀನರಾಗುತ್ತೇವೆ. ಅದಕ್ಕೆ ಅವಕಾಶ ಮಾಡಿಕೊಡಕೂಡದು. ನಮಗೆ ಬೇಕಾಗಿದ್ದು ಇನ್ನಷ್ಟು ಪ್ರಗತಿದಾಯಕವಾದಂಥ ಕಾನೂನು. ಭವಿಷ್ಯದ ದೃಷ್ಟಿಯಿಂದ ಹೊಸ ಸಮಾಜವನ್ನು, ವ್ಯವಸ್ಥೆಯನ್ನು ನಿರ್ಮಾಣ ಮಾಡಬೇಕೆನ್ನುವುದಾದರೆ, ಅದಕ್ಕೆ ಬೇಕಾದಂಥ ಸಿದ್ಧತೆಯನ್ನು ಇಂತಹ ವ್ಯವಸ್ಥೆಯಲ್ಲಿ ನಾವು ಮಾಡಬೇಕಾಗುತ್ತದೆ. ಇದನ್ನು ಯಾರೂ ವಿಚಾರ ಮಾಡದೇ ಇದ್ದಾರೆ ಮತ್ತು ನಮ್ಮ ಮುಖ್ಯಮಂತ್ರಿಗಳು ಅಮೇರಿಕಾಕ್ಕೆ ಏತಕ್ಕೆ ಹೋಗಿದ್ದರು?

ಇಡೀ ಜಗತ್ತೆಲ್ಲಾ ಅವರು ಮುಖ್ಯಮಂತ್ರಿಯಾಗಿ ಹಾಗೂ ಮಂತ್ರಿಯಾಗಿ ತಿರುಗಿದ್ದಾರೆ. ರಷ್ಯಾ, ಅಮೇರಿಕಾ ಎಲ್ಲಾ ತಿರುಗಿಬಿಟ್ಟರಪ್ಪ. ನಾನು ಖಂಡಿತವಾಗಿ ಒಂದೇ ಒಂದು ಸಾರಿ ಜಪಾನ್‌ಗೆ ಹೋಗಿದ್ದೆ. ಮಾನ್ಯ ಭೈರೇಗೌಡರು ಇಲ್ಲೇ ಇದ್ದಾರೆ. ಅವರನ್ನು ನಾನು ಆಗ ಕರೆದುಕೊಂಡು ಹೋದೆ. ಮಾನ್ಯ

ದೇವರಾಜ ಅರಸ್ ಅವರಿಗೆ ಹೇಳಿ. ಈಗ ಇವರು ಹೋಗಬೇಕಾದರೆ ತಿಮ್ಮಪ್ಪ ನೆನಪೇ ಬರಲಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಸರ್ಕಾರದ ನೀತಿಯನ್ನೂ ಈ ಮಸೂದೆ ಜೊತೆ ಹೇಳಬೇಕಾಗುತ್ತದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ, ರಾಜ್ಯದ ಹೆದ್ದಾರಿಗಳಲ್ಲಿ, ಎನ್‌ಕ್ರೋಚ್‌ಮೆಂಟ್ ಆಗಿ ಕೆಲವು ಕಡೆ ಕಟ್ಟಡಗಳು ಬಂದಿರುವಂತಾದಕ್ಕೆ, ಲೋಕೋಪಯೋಗಿ ಇಲಾಖೆಯವರು ಆಗಲೇ ಆಸಕ್ತರಾಗಿ ಅದಕ್ಕೆ ಸಂಬಂಧಪಟ್ಟ ಆದೇಶಗಳನ್ನು ಹೊರಡಿಸಿ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ನಾಗರೀಕರು, ಮಾಲೀಕರು ಹೊಂದಿರುವಂತಹ ಕಟ್ಟಡಗಳ ಬಗ್ಗೆ ಸಭೆಗಳನ್ನು ನಡೆಸಿ ಕೆಲವು ಭಾಗದಲ್ಲಿ ಒಡೆದೂ ಆಯಿತು. ಅದು ಹರಿಹರ ಇರಬಹುದು, ದಾವಣಗೆರೆ ಇರಬಹುದು, ತಿಪಟೂರು ಇರಬಹುದು, ಶಿವಮೊಗ್ಗ ಇರಬಹುದು, ಕೆಲವು ಕಡೆ ಒಡೆದು ಆಯಿತು. ಆದರೆ ಈಗ ಈ ಮಸೂದೆಯನ್ನು ಮಂಡನೆ ಮಾಡಿದ್ದೀರಿ ನೀವು. ಆ ಅಕ್ರಮವಾಗಿ ಒತ್ತುವರಿ ಮಾಡಿರುವಂತಾದ್ದನ್ನು ಸಕ್ರಮಗೊಳಿಸುತ್ತೇವೆಂದು ಆದರೆ ಈ ರಸ್ತೆಗಳನ್ನು ತಾವು ಯಾವ ಆಧಾರದ ಮೇಲೆ ಅಗಲ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಇದರ ಬಗ್ಗೆ ನಮ್ಮ ಮಾನ್ಯ ನಗರಾಭಿವೃದ್ಧಿ ಸಚಿವರು ನಿರ್ದಿಷ್ಟವಾಗಿ ಹೇಳಬೇಕಾಗುತ್ತದೆ. ಅಕ್ರಮವಾಗಿ ಒತ್ತುವರಿ ಮಾಡಿರುವಂತಾದ್ದನ್ನು ಸಕ್ರಮಗೊಳಿಸುತ್ತೇವೆ ಈ ಮಸೂದೆ ಪ್ರಕಾರ ಎಂದು. ಆದರೆ, ಯಾವುದೇ ರಸ್ತೆಯನ್ನೂ ಸಹ ತಾವು ಅರ್ಧ ಇಂಚೂ ಸಹ ಹಿಂದೆ ಮುಂದೆ ಮಾಡುವುದಕ್ಕೆ ಆಗುವುದಿಲ್ಲ. ಈ ಮಸೂದೆಯನ್ನು ತಾವು ಹಿಂದೆ ಪಡೆಯುವಂತಾದ್ದು ಸೂಕ್ತ ಎಂದು ನನ್ನ ಸಲಹೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಮುಖ್ಯಮಂತ್ರಿಗಳು ಇಷ್ಟೆಲ್ಲಾ ಹೋಗಿಬಂದಿದ್ದಾರೆ ಅಂದರೆ ಏನಾದರೂ ಒಂದು ಹೊಸದನ್ನು ಈ ಕರ್ನಾಟಕ ರಾಜ್ಯಕ್ಕೆ ಅಳವಡಿಸತಕ್ಕಂಥಾ ಕೆಲಸವನ್ನು ಮಾಡಿದ್ದರೆ ನಮ್ಮ ಮಾನ್ಯ ವಾಟಾಳ್ ನಾಗರಾಜ್ ಅವರು ಆಗಲೇ ಹೇಳಿದರು ಸಿದ್ದರಾಮಯ್ಯನವರು ಕೆಸರಿನಲ್ಲಿ ಬೆಳೆದಂತಹ ಒಂದು ಕಮಲ, ಆ ಕಮಲಕ್ಕೆ ಬೆಲೆ ಬರುತ್ತಿತ್ತೋ ಇಲ್ಲದಿದ್ದರೆ ಆ ಕೆಸರಿನಲ್ಲಿ ಕಮಲ ಹೂತು ಹೋಗಿ ಬಿಡುತ್ತದೆ. ಆದ್ದರಿಂದ ಏನೂ ಬೆಲೆ ಸಿಗಲಿಲ್ಲ. ಇದಕ್ಕಾಗಿ ವಿದೇಶಕ್ಕೆ ಹೋಗಬೇಕಾದ ಅಗತ್ಯ ಇರಲಿಲ್ಲ. ಆದ್ದರಿಂದ ದುರಂತ ಏನಾಗಿದೆ?

ಶ್ರೀ ಎಸ್.ಎಸ್. ಪಾಟೀಲ್ : ಅಮೆರಿಕಾದ ವಿಸ್ತೀರ್ಣ ಹಾಗೂ ಜನಸಂಖ್ಯೆ ಎಷ್ಟು ಹಾಗೂ ನಮ್ಮ ದೇಶದ ಜನಸಂಖ್ಯೆ ಮತ್ತು ವಿಸ್ತೀರ್ಣ ಎಷ್ಟು ಎಂಬುದನ್ನು ಹೇಳುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ನಾವು ಅಷ್ಟೊಂದು ದಡ್ಡರಲ್ಲ. ನಮ್ಮ ಜನಕ್ಕೆ ನಮಗೆ ಇರುವ ಭೂಮಿಗೆ, ನಾವು ಓದಿರುವುದಕ್ಕೆ, ನಮಗೆ ತಿಳಿದಿರುವುದಕ್ಕೆ ಶತಮಾನದಲ್ಲಿ ಏನಾಗಬಹುದು ಮುಂದಿನ ಶತಮಾನದಲ್ಲಿ ಏನಾಗಬಹುದು ಅದಕ್ಕೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ನಮ್ಮ ನಾಗರೀಕ ವ್ಯವಸ್ಥೆಯಲ್ಲಿ ಏನು ಅನುಕೂಲಗಳನ್ನು ನಾವು ಸೃಷ್ಟಿ ಮಾಡಬೇಕು ಎನ್ನುವ ಕಲ್ಪನೆ ನಮಗೆ ಈ ಕಾಲದಲ್ಲಿ ಇಲ್ಲದೇ ಹೋದರೆ, ಆ ಬಗ್ಗೆ ಆಲೋಚನೆ ವಿಚಾರ ಮಾಡದೇ ಹೋದರೆ, ನಾವು ಆಡಳಿತವನ್ನು ನಡೆಸುವುದಕ್ಕೆ ಯೋಗ್ಯರಾಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಇದಕ್ಕೆ ಮೂಲ ಕಾರಣ ಏನೆಂದರೆ ಜನಸಂಖ್ಯೆ ಹೆಚ್ಚಾದುದ್ದೇ?

ಶ್ರೀ ಕಾಗೋಡು ತಿಮ್ಮಪ್ಪ : ಅದೇ ಕಾರಣ ಏಕೆ ? ನೀವು ತುಂಬಾ ಎಚ್ಚರದಿಂದ ಇರಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಬಿಲ್ ಮೇಲೆ ಮಾತನಾಡುವುದಕ್ಕೆ ಬಿಡಿ.

ಶ್ರೀ ಕಾಗೋಡು ತಿಮ್ಮಪ್ಪ : ಎಂಟನೇ ಗರ್ಭದಲ್ಲಿ ಶ್ರೀ ಕೃಷ್ಣ ಹುಟ್ಟಬಹುದು ; ಆದ್ದರಿಂದ ಕುಟುಂಬ ಯೋಜನೆ ಮಾಡಬಾರದು ಎಂದು ವಿರೋಧ ಮಾಡತಕ್ಕಂಥವರೂ ಒಂದು ಕಾಲತೆ ಇದ್ದಾರೆ. ಹುಟ್ಟಿದರೆ ಹುಟ್ಟಲಪ್ಪಾ ಮಾರಾಯ ಸಧ್ಯಕ್ಕಂತೂ ಇರುವ ಅನ್ನವನ್ನು ತಿಂದುಕೊಳ್ಳೋಣ ಎಂದು ಪ್ರಗತಿಪರವಾದ ವಿಚಾರವನ್ನು ಮಾಡುವವರೂ ಸಹ ಇದ್ದಾರೆ. ಹೌದು ತಾನೇ? ಇದು ಜಾಸ್ತಿಯಾಗುತ್ತಿದೆ. ಇದರ ಬಗ್ಗೆ ನಮಗೆಲ್ಲರಿಗೂ ಮನವರಿಕೆ ಆಗಿದೆ. 50 ವರ್ಷಗಳ ಹಿಂದೆ ಇದ್ದಂತಹ ಅಭಿಪ್ರಾಯ ಈಗ ಇಲ್ಲ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ, ಮಕ್ಕಳು ಹುಟ್ಟಲಿ ಎಂದು ಏಕೆ ಹೇಳುತ್ತಾರೆ ಅಂದರೆ ನಾವು ಭಾರತೀಯರು ಇದ್ದೇವೆ. ವಸುದೇವ ದೇವಕಿಯರ ಅಷ್ಟಮ ಗರ್ಭದಲ್ಲಿ ಶ್ರೀಕೃಷ್ಣ ಜನಿಸಿದ. ಅವರು ಆಗಲೇ ಏನಾದರೂ ಫ್ಯಾಮಿಲಿ ಪ್ಲಾನಿಂಗ್ ಮಾಡಿಬಿಟ್ಟಿದ್ದರೆ ಶ್ರೀಕೃಷ್ಣ ಎಲ್ಲಿ ಜನಿಸುತ್ತಿದ್ದ?

ಶ್ರೀ ಕಾಗೋಡು ತಿಮ್ಮಪ್ಪ : ಇಲ್ಲ ಇಲ್ಲ ಇದೊಂದು ಕಥೆ. ಆ ಕಥೆಗೆ ತದ್ವಿರುದ್ಧವಾಗಿ ಹೇಳಿ ಹೇಳಿ 50 ವರ್ಷದಲ್ಲಿ ಇಲ್ಲಪ್ಪ ಕೃಷ್ಣ ಬರದಿದ್ದರೂ ಚಿಂತೆ ಇಲ್ಲ....

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾವು ಅದನ್ನೇ ಹೇಳುತ್ತಿರುವುದು. ಆ ಕೃಷ್ಣ ಬಾರದೇ ಇರಲಿ ಎಂದು.

ಶ್ರೀ ಕಾಗೋಡು ತಿಮ್ಮಪ್ಪ : ಆದ್ದರಿಂದ ಇವತ್ತು ಚಿಂತೆ ಬದಲಾವಣೆ ಆಗಿದೆ. ಈ ಚಿಂತೆ ಬದಲಾವಣೆಯಾದ ಮೇಲೆ ನಮಗೆ ಬೇಕಾದಂತಹ ನಾಗರೀಕ ಸೌಲಭ್ಯಗಳನ್ನು ನಾವು ಒದಗಿಸಿಕೊಡದೇ ಹೋದರೆ ಮುಂದಿನ ಭವಿಷ್ಯದಲ್ಲಿ ಏನು ಹೇಳುತ್ತಾರೆ. ಆದ್ದರಿಂದ ಈ ರೀತಿ ನಾವು ವಿಚಾರ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ಹುಬ್ಬಳ್ಳಿಯ ನಗರದ ನಾಗರೀಕ ಸೌಲಭ್ಯಗಳನ್ನು ನಿರ್ವಹಿಸುವುದಕ್ಕೆ ಆಗುವುದಿಲ್ಲ. ಹಾಗೆಯೇ ಪ್ರತಿಯೊಂದು ಭಾಗದಲ್ಲಿಯೂ ಕೂಡ ಕಷ್ಟದ ಪರಿಸ್ಥಿತಿ ಉದ್ಭವವಾಗಿದೆ. ಈ ಪರ್ವ ಕಾಲದಲ್ಲಿ ನಾವು ಇದ್ದೇವೆ. ಈ ಒಂದು ಪರ್ವ ಕಾಲದಲ್ಲಿ ಇದ್ದಂಥ ಸಂದರ್ಭದಲ್ಲಿ ನಾವು ಕಾನೂನು ಮಾಡುವಾಗ ಅಥವಾ ಒಂದು ಯೋಜನೆಗಳನ್ನು ಮಾಡುವಾಗ ನಾವು ಭವಿಷ್ಯದ ಕಡೆ ಲಕ್ಷ್ಯ ಇಟ್ಟುಕೊಂಡೇ ಕೆಲಸ ಮಾಡಬೇಕಾಗುತ್ತದೆ. 1961ನೇ ಇಸವಿಯಲ್ಲಿ ಇಷ್ಟೊಂದು ವಿಚಾರ ಮಾಡಿ ಕಾನೂನು ತಂದಂತಾದ್ದು ಈಗ ನಾವು ಎಷ್ಟು ವರ್ಷ ಮುಂದೆ ಇದ್ದೇವೆ? ಅಂದರೆ ಸುಮಾರು 37 ವರ್ಷಗಳು ಮುಂದೆ ಇದ್ದೇವೆ. ಈ 37 ವರ್ಷಗಳು ಕಳೆದಾದ ಮೇಲೆ ಇನ್ನಷ್ಟು ಪ್ರಗತಿದಾಯಕವಾದ ಕಾನೂನು ತರಬೇಕೇ ವಿನಹಃ ಮತ್ತೆ ಹಿಂದಕ್ಕೆ ಹೋಗತಕ್ಕಂಥಾದ್ದು ನ್ಯಾಯವಲ್ಲ. ವಾಸ್ತವಿಕವಾಗಿ ಈ ಮಸೂದೆಯನ್ನು ವಾಪಸ್ಸು ಪಡೆಯಿರಿ. ಇಲ್ಲಾ ಅವರು ಹೇಳಿದಂತೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಿ. ಇದನ್ನು ವಿಚಾರ ಮಾಡೋಣ. ಇದರಲ್ಲಿ ಯಾರಿಗೂ ಸ್ವಾರ್ಥ ಇಲ್ಲ. ಏನಿದ್ದರೂ ನಮ್ಮ ನಾಗರೀಕ ಸೌಲಭ್ಯಗಳಿಗೆ ತೊಂದರೆಯಾಗದಂತಹ ರೀತಿಯಲ್ಲಿ ಬೆಳವಣಿಗೆ ಮಾಡಬೇಕು. ಬೆಳವಣಿಗೆಯಾಗಿದ್ದು ಅಡಚಣೆಯಾಗಿದ್ದರೆ ಅದನ್ನು ತೆಗೆಯಲೇಬೇಕಾಗುತ್ತದೆ. ಅಡಚಣೆ ಇಲ್ಲ ಎಂದು ಕಂಡು ಬಂದರೆ ಉಳಿಸಿಕೊಳ್ಳಿ ನಮ್ಮದೇನೂ ಇಲ್ಲ. ಏಕಾಏಕಿಯಾಗಿ ತರತಕ್ಕಂಥಾದ್ದು ಸರಿಯಾದಂತಹ

ಕ್ರಮ ಅಲ್ಲ. ಈ ರೀತಿ ಡಿವೀಯೇಷನ್ ಆಗಿದ್ದನ್ನು ರೆಗ್ಯುಲರೈಸ್ ಮಾಡಬೇಕೆಂದು ಎಲ್ಲೂ ಚರ್ಚೆಯಾಗಲಿಲ್ಲ. ಇದು ಪರಮೋಚ್ಚ ಸದನ. ಇಂತಹ ಸಭೆಯಲ್ಲಿ ಒಬ್ಬ ಮಾನ್ಯ ಸದಸ್ಯರೂ ಕೂಡ ಇಂತಹ ಒಂದು ಕಾನೂನು ತರಬೇಕು ಇದನ್ನು ಸಕ್ರಮಗೊಳಿಸಿ ಕೊಡಬೇಕು ಎಂದು ಯಾರೂ ಪ್ರಶ್ನೆ ಹಾಕಿಲ್ಲ ; ಚರ್ಚೆ ಮಾಡಲಿಲ್ಲ. ಏನೂ ಇಲ್ಲ. ಅದು ಹೇಗೆ ಇದು ನಿಮ್ಮ ತಲೆಗೆ ಹೊಳೆಯಿತು? ಇದನ್ನು ಯಾರು ನಿಮ್ಮ ತಲೆಗೆ ತುಂಬಿದರು? ನಮ್ಮ ಪತ್ರಿಕಾ ಮಾಧ್ಯಮಗಳಲ್ಲಿ ಕೂಡ ಎಲ್ಲಿಯೂ ಯಾರೂ ಬರೆಯಲಿಲ್ಲ. ಈಗ ನೋಡಿ ನಮ್ಮ ಹಾಲಿಡೇ ಇನ್ ಹೋಟೆಲ್, ನಮ್ಮ ಮಲ್ಯ ಆಸ್ಪತ್ರೆ ಇದಕ್ಕೆ ರಸ್ತೆ ಇಲ್ಲ. ಆದರೂ ಚಿಂತೆ ಇಲ್ಲ ಡಿವೀಯೇಷನ್ ಇದ್ದರೆ ಅದನ್ನು ರೆಗ್ಯುಲರೈಸ್ ಮಾಡಿಕೊಡಬೇಕಾಗುತ್ತದೆ ಎಂದು ಯಾವ ಮಾಧ್ಯಮ ಕೂಡ ಅಭಿಪ್ರಾಯವನ್ನು ರೂಢಿಸಲಿಲ್ಲ. ಹೀಗೆ ಶಾಸನ ಸಭೆಗಳಲ್ಲಿ, ಸಾರ್ವಜನಿಕವಾಗಿ, ಮಾಧ್ಯಮಗಳಲ್ಲಿ ಇಂತಹ ಅಕ್ರಮಗಳನ್ನು ಸಕ್ರಮಗೊಳಿಸುವುದಕ್ಕೆ ಅಭಿಪ್ರಾಯಗಳನ್ನು ರೂಢಿಸದೇ ಇರತಕ್ಕಂಥ ಒಂದು ವಾತಾವರಣ ಇರುವಾಗ...

ಶ್ರೀ ಡಿ.ಬಿ. ಇನಾಂದಾರ್ : ಅದು ಅಷ್ಟೇ ಅಲ್ಲ. ತಾವು ಬರೀ ಎರಡೇ ಎರಡು ಹೇಳಿದಿರಿ. ಎಷ್ಟೊಂದು ಬಿಲ್ಡಿಂಗ್ಸ್ ಇಲ್ಲೀಗಲ್ ಕನ್‌ಸ್ಟ್ರಕ್ಷನ್ಸ್ ಬೇಸ್‌ಮೆಂಟ್ ಏನು ಇದೆ ಅದೆಲ್ಲಾ ಮಿಸ್‌ಯೂಸ್ ಆಗಿವೆ. Parking slots have been misused ಅವುಗಳನ್ನೆಲ್ಲಾ ರೆಗ್ಯುಲರೈಸ್ ಮಾಡುವುದಕ್ಕೆ ಈ ಮಸೂದೆ.

ಶ್ರೀ ಕಾಗೋಡು ತಿಮ್ಮಪ್ಪ : ಹೌದು, ಎಲ್ಲಿಯೂ ಬರಲಿಲ್ಲ. ಅದು ಯಾವ ಸಮಯದಲ್ಲಿ ನಿಮಗೆ ಜ್ಞಾನೋದಯವಾಯಿತೋ ನಮಗೆ ಗೊತ್ತಿಲ್ಲ. ಇದನ್ನು ಸರ್ವಥಾ ಮಾಡಬಾರದು. ಸರಿ ಇಲ್ಲ ಇದಕ್ಕೆ ಸಾರ್ವತ್ರಿಕವಾದಂತಹ ಬೆಂಬಲ ಇಲ್ಲ. ಮಾಧ್ಯಮದ ಬೆಂಬಲ ಇಲ್ಲ. ನಮ್ಮ ಮಾನ್ಯ ಸದಸ್ಯರಾದ ಇನಾಂದಾರ್ ಹೇಳಿದ ರೀತಿಯಲ್ಲಿ ಬೆಂಗಳೂರಿನಂತಹ ನಗರದಲ್ಲಿ ಯಾವ ಯಾವ ಭಾಗದ ಕಟ್ಟಡವನ್ನು ಪಾರ್ಕಿಂಗ್‌ಗೆ ಉಪಯೋಗ ಮಾಡಬೇಕಾದ್ದನ್ನು ಮಿಸ್‌ಯೂಸ್ ಮಾಡಿದ್ದಾರೆ. ಆದ್ದರಿಂದ ಇವೆಲ್ಲವನ್ನು ಸಕ್ರಮಗೊಳಿಸತಕ್ಕಂಥ ಉದ್ದೇಶವೇ ಇದು. ಈಗ ನಮ್ಮ ಏರ್ ಪೋರ್ಟ್‌ಗೆ ಹೋಗತಕ್ಕಂಥ ದಾರಿಯಲ್ಲಿ ಇರತಕ್ಕಂಥ ಕಟ್ಟಡ. ಅದರ ಬಗ್ಗೆ ಇಲ್ಲಿ ಬಹಳ ಪ್ರಮುಖವಾದ ಚರ್ಚೆ ನಡೆದಿದೆ. ಈಗ ಇದನ್ನು ವಿಶೇಷವಾಗಿ ಶ್ರೀಮಂತರು, ದೊಡ್ಡ ದೊಡ್ಡ ಉದ್ದಿಮೆದಾರರು ತಾವು ಅಕ್ರಮ ಮಾಡಿ ಕಟ್ಟಿರತಕ್ಕಂಥಾ ಏನು ಕಟ್ಟಡಗಳು ಇವೆ ಅವುಗಳನ್ನು ಸಕ್ರಮಗೊಳಿಸಿಕೊಳ್ಳುವುದಕ್ಕೆ ತಂದಿರತಕ್ಕಂಥ ಒಂದು ಮಸೂದೆ. ಇದನ್ನು ಸಕ್ರಮಗೊಳಿಸಬೇಕಾದರೆ ಯಾರೂ ಸತ್ಯ ಹರಿಶ್ಚಂದ್ರರಾಗಿ ಇರುವುದಿಲ್ಲ.

ಇಲ್ಲಿ ಹಣದ ವ್ಯವಹಾರ ನಡದೇ ನಡೆಯುತ್ತದೆ. ಅದರಲ್ಲೂ ಚುನಾವಣೆ ಮುಂದಿಟ್ಟುಕೊಂಡು ಮಾಡುವ ಸಂದರ್ಭದಲ್ಲಿ ಅನಾವಶ್ಯಕವಾದಂಥ ದೂರಿಗೆ ನೀವೇಕೆ ತಲೆಕೊಡುತ್ತೀರಿ? ನಾನು ಹೇಳದಿದ್ದರೂ ಸಾರ್ವಜನಿಕರು ಹೇಳುತ್ತಾರೆ. ಪತ್ರಿಕೆಯವರು ಕೇಳುತ್ತಾರೆ, ಏನಿದು ತರಾತುರಿಯಲ್ಲಿ ತಂದಿದ್ದಾರೆ, ಎಲ್ಲೂ ವಿಚಾರ ಮಾಡಲಿಲ್ಲ, ತರುವುದಕ್ಕೆ ಏನು ಉದ್ದೇಶ, ಏನೋ ಇರಬೇಕು; ಏಕೆಂದರೆ ಯಾರು ಮುಖ್ಯಮಂತ್ರಿಗಳ ಮಾವಂದಿರಿಲ್ಲ, ನೆಂಟರಿಲ್ಲ ಇಷ್ಟರಿಲ್ಲ, ಮತ್ಯಾಕೆ ತಂದಿರಿ? ಈ ಊಹೆಗೆ ದಯವಿಟ್ಟು ಅವಕಾಶ ಕೊಡಬೇಡಿ. ಎರಡನೆಯದಾಗಿ ಸೆಕ್ಷನ್ 14ಬಿ ಬಗ್ಗೆ ಆಗಲೇ ನಮ್ಮ

ಖರ್ಗೆಯವರು ಹೇಳಿದ್ದಾರೆ. ರಸ್ತೆ ಮಾಡುವ ಸಂದರ್ಭದಲ್ಲಿ ಮಾಲೀಕರು ಜಮೀನನ್ನು ಬಿಟ್ಟುಕೊಟ್ಟರೆ ಅವನ ಕಟ್ಟಡದಲ್ಲಿ ಫ್ಲೋರ್ ಏರಿಯಾ ಜಾಸ್ತಿ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡುವುದು-

"Additional floor area ratio on 100% of the area required for road widening or for construction of new road proposed in the development plan or roads proposed by the planning authority of the local authorities in addition to the floor area ratio permissible for this entire area of the original site."

ಅಂದರೆ ನೀವೇನೋ ರೋಡಿಗೆ ತೆಗೆದುಕೊಳ್ಳುತ್ತೀರಿ. ಅವನಿಗೆ ಇನ್ನೊಂದು ಫ್ಲೋರ್ ಏರಿಯಾ ಜಾಸ್ತಿ ಮಾಡುವುದಕ್ಕೆ ಅವಕಾಶ ಕೊಡುತ್ತೀರಿ. This needs a thorough technical investigation/appraisal. -- ಅವನಿಗೆ ಬಿಲ್ಡಿಂಗ್ ಇದ್ದು, if that is technically not viable to raise the height of the building, then what would be the fate of this provision?

ಶ್ರೀ ಬಿ.ಎಸ್. ಬಚ್ಚೇಗೌಡ : ನಿಮಗೆ ಅವಕಾಶ ಮಾಡಿಕೊಟ್ಟು ನಾನು ಮೇಲೆ ಹಾಕಿಕೊಳ್ಳುತ್ತೇನೆ ಅಂದರೆ ಬಿಲ್ಡಿಂಗ್ ರೆಗ್ಯುಲೇಷನ್ಸ್ ಮೇಲೆ ಕಟ್ಟಿರುವುದಕ್ಕೆ ಮಾಡುವುದು. ತಾವು ಬೇರೆ ರೀತಿ ವಿಶ್ಲೇಷಣೆ ಮಾಡುತ್ತೀರಿ. That is not there in the amendment.

ಶ್ರೀ ಕಾಗೋಡು ತಿಮ್ಮಪ್ಪ : ಆಯಿತು ; ಇನ್ನು ಸ್ಟಾರ್ ಹೋಟೆಲಿಗೆ ಬಂದಿರಿ, ಹೌದು ತಾನೇ; ಏನು ಹೇಳುತ್ತೀರಿ? Starred category of a resident hotel subject to payment of such amount and such other terms and conditions as it may specify..ಯಾವಾಗ ಅದು?ಯಾರು ಮಾಡುವುದು? ಈ ಸದನಕ್ಕೇನೂ ತಿಳಿಯುವುದು ಬೇಡವಾ? ಯಾವ ಷರತ್ತುಗಳ ಮೇಲೆ ಮಾಡುತ್ತೀರಿ ಹೇಳಿ. ಇಲ್ಲಿ ಚರ್ಚೆಯಾಗಲಿ, ಸಲಹೆ ತೆಗೆದುಕೊಳ್ಳಿರಿ ಏನೂ ಇಲ್ಲದೆ ಅಡ್ಡಗೋಡೆ ಮೇಲೆ ದೀಪ ಇಟ್ಟಂತೆ ಮಾಡುತ್ತೇವೆ ಅಂದರೆ ಕಡ್ಲಪ್ಪನ ಕತೆ ವ್ಯಾಪಾರನಾ? ನಮ್ಮಲ್ಲಿ ಹಾವೇರಿನಲ್ಲಿ ಒಳಗಡೆ ಕೈ;ಬಟ್ಟೆ ಮುಚ್ಚಿಕೊಳ್ಳುವುದು ಎತ್ತಿನ ವ್ಯಾಪಾರ ಮಾಡುತ್ತಾರೆ, ಹಾಸನದಲ್ಲೂ ಮಾಡುತ್ತಾರೆ ಎಂದು ಕಾಣಿಸುತ್ತದೆ. - ಈ ವ್ಯಾಪಾರ ಇದರಲ್ಲಿ ಇವತ್ತು ನಡೆಯುತ್ತದೆ. ಇದು ಕಣ್ಣು ಕಟ್ಟು ವ್ಯಾಪಾರ - ಮತ್ತೆ ಅವರಿಗೆ ದುಡ್ಡು ತಿನ್ನೋಕೆ ಮಾಡ್ತೀರಾ; ಭ್ರಷ್ಟಾಚಾರ ಆಗೋ ಹಾಗೆ ಮಾಡ್ತೀರಾ? Be specific and come out? What is your thinking?ಯಾವ ಟರ್ಮ್ ಅಂಡ್ ಕಂಡೀಷನ್ಸ್ ಮೇಲೆ ಮಾಡ್ತೀರಿ, ಬೆಂಗಳೂರು ನಗರದಲ್ಲಿ ಏನಾಗುತ್ತದೆ? ಪಂಚತಾರಾ ಆದರೆ ಎಷ್ಟು ತ್ರಿಸ್ಟಾರ್ ಆದರೆ ಎಷ್ಟಾಗುತ್ತದೆ? ವಾಣಿಜ್ಯ ಕಟ್ಟಡ ಇದ್ದರೆ ಏನಾಗುತ್ತದೆ Give a schedule. ಟೇಬಲ್ ಕೊಡಿರಿ ಅಂದರೆ ನೀವೇನೂ ವಿಚಾರ ಮಾಡಿಲ್ಲ ಎಂದು ಆಯಿತಲ್ಲಾ. ಹಣ ಬರುತ್ತದೆ ಅನ್ನುತ್ತೀರಿ, ಎಷ್ಟು ಬರುತ್ತದೆ ಎಂಬುದನ್ನು ಹೇಳಬೇಕಾಗಿತ್ತು. ನಮ್ಮ ಸರ್ವೆ ಪ್ರಕಾರ ಇಷ್ಟು ಕಟ್ಟಡ ಇದೆ, ಇಷ್ಟು ಮಾಡಿದರೆ ಇಷ್ಟೊಂದು ಹಣ ಬರುತ್ತದೆ, ಸಿಟಿ ಕಾರ್ಪೋರೇಷನ್ ಇಷ್ಟು, ಮುನಿಸಿಪಲ್ ಕಾರ್ಪೊರೇಷನ್ ಇಷ್ಟು, ಮುನಿಸಿಪಲ್ ಏರಿಯಾ ಆದರೆ ಇಷ್ಟು? ಎಂದು ಈ

ಶೆಡ್ಯೂಲ್ ಆಫ್ ರೇಟ್ ಹಾಕಿರಿ. ಹಾಕದೇ ಇದ್ದರೆ ಚರ್ಚೆ ಆಗುವುದಿಲ್ಲ, ಅಭಿಪ್ರಾಯ ಬರುವುದಿಲ್ಲ, ನೀವು ಮಾಡೋಕೆ ಬರೋಲ್ಲ. ಉದಾಹರಣೆಗೆ ಹೇಳುತ್ತೇನೆ, ಕೇಳಿರಿ: ನೀವು ನಗರಾಭಿವೃದ್ಧಿ ಸಚಿವರಾಗಿದ್ದಿರಿ, ಹೌದು ತಾನೇ, ಮೊಯ್ಲಿಯವರಿದ್ದಾಗ ನಾವೊಂದು ಕಾನೂನು ತಂದೆವು. ಪಟ್ಟಣ ಪ್ರದೇಶದಲ್ಲಿ ತನ್ನದೇ ಸ್ವಂತ ಜಮೀನಿನಲ್ಲೂ ಪರ್ಮಿಶನ್ ಇಲ್ಲದೆ ಕನ್‌ವರ್ಶನ್ ಇಲ್ಲದೆ ರೆವಿನ್ಯೂ ಸೈಟ್ ಎಂದು ಹೇಳುತ್ತೀವಲ್ಲಾ, ಇದನ್ನೆಲ್ಲಾ ರೆಗ್ಯುಲರೈಸ್ ಮಾಡುವುದಕ್ಕೆ ಒಂದು ಕಾನೂನು ತಂದಿದ್ದೆವು. 1994 ಅಕ್ಟೋಬರ್ 2ನೇ ದಿನದವರೆಗೆ ಅಂದರೆ ನಮ್ಮ ಅಧಿಕಾರದ ಕಡೇ ದಿವಸದವರೆಗೆ ಅರ್ಜಿ ಸ್ವೀಕಾರಕ್ಕೆ ಕೊನೇ ದಿವಸ ಎಂದು ಮಾಡಿದ್ದೆವು. ನೀವು 1994ರಲ್ಲಿ ಅಧಿಕಾರಕ್ಕೆ ಬಂದ ಮೇಲೆ ಅದನ್ನು ಡಿಸೆಂಬರ್ ಅಂತ್ಯದವರೆಗೆ ವಿಸ್ತರಿಸಿದಿರಿ. ಇವತ್ತಿನವರೆಗೂ ಅರ್ಜಿ ತೀರ್ಮಾನ ಮಾಡಿದ್ದೀರಾ? ಒಬ್ಬ ಜಿಲ್ಲಾಧಿಕಾರಿ ಯಾವ ವ್ಯಾಲ್ಯೂ ಹಾಕಬೇಕು ಎಂದು ವಿವರಣೆ ಬಯಸಿದ್ದರೆ ಅದಕ್ಕೆ 6 ತಿಂಗಳಾದರೂ ಉತ್ತರ ಕೊಟ್ಟಿಲ್ಲ. ಎಷ್ಟು ಅರ್ಜಿ ತೀರ್ಮಾನ ಮಾಡಿದ್ದೀರಿ ಹೇಳಿ ನೋಡೋಣ. ಅದರಲ್ಲಿ ವ್ಯಾಲ್ಯೂ ಹೇಳಿಬಿಟ್ಟಿದ್ದರೆ ಇಷ್ಟು ಆಗುತ್ತಿರಲಿಲ್ಲ. ಅಕಸ್ಮಾತ್ತಾಗಿ ಒಂದು ವೇಳೆ ಆಗದಿದ್ದರೂ ಕೂಡ ಒಂದು ಕಮಿಟಿ ಮಾಡಿದ್ದಿರಿ, ಹೋಗಲಿ, ಅದು ಬೇಡ ; ಜಿಲ್ಲಾಧಿಕಾರಿಗೆ ಅಧಿಕಾರ ಕೊಟ್ಟಿದ್ದೀರಿ - ಆದರೆ ಇವತ್ತಿನವರೆಗೂ ಮಾಡಿಲ್ಲ. ಹಾಗೇ ಇಲ್ಲಿಯೂ ನೀವು ಕತ್ತಲೆಯಲ್ಲಿ ವ್ಯಾಪಾರ ಮಾಡಲಿಕ್ಕೆ ಹೊರಟರೆ ಇದರಲ್ಲಿ ಭ್ರಷ್ಟಾಚಾರಕ್ಕೆ ವ್ಯವಸ್ಥೆ ನಾವೇ ಮಾಡಿಕೊಟ್ಟಂತಾಗುತ್ತದೆ. ನೀವೂ ವಿಚಾರ ಮಾಡಿರಿ. ಆದ್ದರಿಂದ ನೀವು ಇವತ್ತು ನಮ್ಮನ್ನು ಒಪ್ಪಿಸಬೇಕಾದರೆ ಎಷ್ಟು ಏರಿಯಾ ಇದೆ, ಬೆಂಗಳೂರಿನಲ್ಲಿ ಎಷ್ಟು ದುಡ್ಡು ಬರುತ್ತದೆ ಯಾವ್ಯಾವ ರೇಟ್ ಎಂದು ವರ್ಕೌಟ್ ಮಾಡಿದೀರೋ ಹೇಗೆ? ಅದಕ್ಕೆ ಒಂದು ಮೆಕ್ಯಾನಿಸಂ ವರ್ಕ್ ಔಟ್ ಮಾಡಿರಬೇಕಲ್ಲಾ ; ನೋಡುವುದಕ್ಕೆ ಮಾಡಿದ್ದರೆ ಹೇಳಿ ನಮ್ಮ ಮುಂದೆ ಈಗ. ಇದು ಮೂರೇ ಸೆಕ್ಷನ್ನಿನ ಸಣ್ಣ ತಿದ್ದುಪಡಿ, ಮೂರೇ ಪೇಜು, ಆದರೆ ಪರಿಣಾಮ ದೊಡ್ಡದು. ಜೊತೆಜೊತೆಗೆ ಇದರ ಪರಿಣಾಮ ನಗರಗಳ ಆಸ್ತಿ ಮೇಲೆ ಆಗುತ್ತದೆ. ಬಚ್ಚೇಗೌಡರೇ ನಿಮಗೆ ಗೊತ್ತಿದೆ, ಎಷ್ಟೋ ಜನ ಸೆಲ್ಲರ್ ಮಾಡಿದ್ದನ್ನು ಬೇರೆ ಬೇರೆ ಉಪಯೋಗ ಮಾಡಿಕೊಂಡಿದ್ದಾರೆ. ನಮಗೆ ಗೊತ್ತಿರುವ ಪ್ರಕಾರ ಕೆಲವು ಕಾರ್ಪೊರೇಷನ್ ಅಧಿಕಾರಿಗಳು ಲೂಟೀನೇ ಹೊಡೆಯುತ್ತಾರೆ. ಇಷ್ಟು ಕೊಡು, ಇಷ್ಟು ಮಾಡಿಕೋ ಎಂದು. ಸಾರ್ವಜನಿಕರ ಮುಂದೆ ನಾವು ಇಂಥ ತಿದ್ದುಪಡಿ ತರುತ್ತೇವೆ ಅಂದಿದ್ದರೆ ಅವರೂ ಅಭಿಪ್ರಾಯ ಹೇಳುತ್ತಿದ್ದರು. ಎಷ್ಟೋ ವಿಚಾರವಂತರಿದ್ದಾರೆ, ಕಾರ್ಪೊರೇಷನ್‌ನಲ್ಲಿ ಕೆಲಸ ಮಾಡಿದವರಿದ್ದಾರೆ. ನಗರಗಳ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುವವರಿದ್ದಾರೆ. ಅವರೆಲ್ಲರೂ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸುತ್ತಿದ್ದರು; ಅಂತಹ ಯಾವ ಪ್ರಯತ್ನವನ್ನೂ ನೀವು ಮಾಡಲಿಲ್ಲ. ಜೊತೆಗೆ ಮಸೂದೆ ಮಂಡಿಸುವಾಗಲೂ ಸದನವನ್ನು ನೀವು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ನೀವು ಮುಗುಮ್ಮಾಗಿ ಅತ್ಯಂತ ಗುಪ್ತವಾಗಿ ಒಂದು ಪ್ರಾವಿಷನ್ ಅನ್ನು ಮಾಡಿಕೊಂಡರೆ ನಾವು ಹೇಗೆ ಇದನ್ನು ಒಪ್ಪುವುದಕ್ಕಾಗುತ್ತದೆ? ಖಂಡಿತಾ ಒಪ್ಪಲು ಆಗುವುದಿಲ್ಲ. ಆದ್ದರಿಂದ ಶೆಡ್ಯೂಲ್ ಆಫ್ ರೇಟ್ಸ್‌ನ್ನು ಇಷ್ಟು ಹಾಕುತ್ತೇವೆ, ಏನೇನು ಮಾಡುತ್ತೇವೆ ಎಂದು ನಮಗೆ ತಿಳಿಸಿ ಹೇಳಲೇಬೇಕಾಗುತ್ತದೆ. ಅಧ್ಯಕ್ಷರೇ ಆಗಲೇ ನಮ್ಮ ಪ್ರಮೀಳಾ ಹೇಳಿದ್ದಾರೆ. 92 ರಿಂದ ಸೆಸ್ ವಸೂಲು ಮಾಡುವ ಬಗ್ಗೆ. ಲೆಕ್ಕ ಎಲ್ಲಿದೆ?

ಯಾರು ವಸೂಲೂ ಮಾಡುವುದು? ಈ ತರಹ ಮಾಡಿದರೆ ಏನಾಗುತ್ತದೆ. ಸುಮ್ಮನೆ ಜನರಿಗೆ ಹಿಂಸೆ ಕೊಡುವುದು. ಎಲ್ಲಾ ಮುಕ್ತಾಯ ಆಗಿ ಹೋಗಿದೆ, ನನ್ನದೇನಿಲ್ಲ ಎಂದು ತಿಳಿದುಕೊಂಡಿರುವವನಿಗೆ ಮತ್ತೆ ಮೇಲಕ್ಕೆ ಕೆದಕಿ ಎಬ್ಬಿಸಿ ಕೊಡೋ ನೀನು ಅನ್ನುವುದು ನಾವು ಪ್ರಾಥಮಿಕ ಶಾಲೆ ಓದುತ್ತಿರಬೇಕಾದರೆ ತೋಳ ಕುರಿಮರಿ ಕತೆ ಇತ್ತಲ್ಲಾ ಹಾಗೆ. ನೀನೋ ನಿಮ್ಮಪ್ಪನೋ; ಕೆಲವರು ಮಾರಾಟ ಮಾಡಿಕೊಂಡು ಹೋಗಿದ್ದಾರೆ. ಇದು ಸರಿಯಾದುದಲ್ಲ. ಇವತ್ತಿನಿಂದ ಬೇಕಾದರೆ ಯಾವತ್ತು ಎಫೆಕ್ಟಿಗೆ ಬರುತ್ತದೋ ಆವತ್ತಿನಿಂದ ಪ್ರಾಸ್ಪೆಕ್ಟೀವ್ ಆಗಿ ವಸೂಲು ಮಾಡಿ. ಅದರಲ್ಲಿ ಅರ್ಥ ಇದೆ. ಆದರೆ 92ನೇ ಇಸವಿಯಿಂದ ವಸೂಲು ಮಾಡುತ್ತೇವೆ ಅಂದರೆ ಕಾರಣಗಳೇನಿವೆ, ಹೇಳಿ. 92ರಿಂದಲೇ ವಸೂಲು ಮಾಡುವುದಕ್ಕೆ ಏನಾದರೂ ಒಂದು ಪ್ರಬಲ ಕಾರಣವಿರಬೇಕು ಒಂದು, ಹೆಚ್ಚು ಕಟ್ಟಡಗಳು ಆವತ್ತಿನಿಂದ ಕಟ್ಟಿರಬೇಕು ಅಥವಾ ಹೆಚ್ಚು ಡೀವಿಯೇಷನ್ ಆವತ್ತಿನಿಂದ ಆಗಿರಬೇಕು.

5.20 ಪಿ.ಎಂ.

92ನೇ ಇಸವಿಯನ್ನು ಯಾವ ಕಾರಣದಿಂದ ಆಯ್ಕೆ ಮಾಡಿದಿರಿ? ಇದಕ್ಕೆ ಯಾವ ಗಜಕಟ್ಟಿಗೆ ಇದೆ? ಇದಕ್ಕೂ ಉದಾ: ಯನ್ನು ಹೇಳಬೇಕಾಗುತ್ತದೆ. ಹಾಗೆಯೇ 92ನೇ ಇಸವಿ ಎಂದು ಹೇಳಿದರೆ ಹಾಗೆ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದರ ಇತಿಹಾಸ ಏನು ಇದೆ, ಏಕೆ ಬಂತು? ಯಾರು ಸಲಹೆ ಮಾಡಿದರು? ಎಲ್ಲಿಂದ ಇದು ಹುಟ್ಟಿದ್ದು? ಇದರ ಒರಿಜಿನೇಟರ್ ಯಾರು? ಮಂತ್ರಿಗಳ ಲೆವೆಲ್ಲೋ, ಸೆಕ್ರೆಟರಿ ಲೆವೆಲ್ಲೋ, ಅಂಡರ್ ಸೆಕ್ರೆಟರಿ ಲೆವೆಲ್ಲೋ, ಇಲ್ಲ ರೆಪ್ರೆಸೆಂಟೇಟೀವ್‌ನಿಂದ ಬಂತೋ ; ಟೌನ್ ಪ್ಲಾನಿಂಗ್ ಕಮೀಷನ್ ಡೈರೆಕ್ಟರಿಂದ ಬಂತೋ? ಎಲ್ಲಿಂದ ಒರಿಜಿನೇಟ್ ಆಯಿತು? ಕಾವೇರಿ ಹುಟ್ಟಿದ್ದು ಎಲ್ಲಿಂದ? ಆ ಕಾವೇರಿ ಹುಟ್ಟಿದ್ದ ಜನ್ಮಸ್ಥಳ ನಮಗೆ ಅರಿವಾದರೆ ಆಗ ನಾವೂ ಕೂಡ ಕಾವೇರಿ ನೀರನ್ನು ಪ್ರೋಕ್ಷಾಳನ ಮಾಡುವುದಕ್ಕೆ ಅವಕಾಶ ಇದೆ. ಇಲ್ಲದಿದ್ದರೆ ಇದನ್ನು ಕಾವೇರಿ ನೀರೆಂದು ತಿಳಿದುಕೊಳ್ಳಬೇಕೋ ಅಥವಾ ವೃಷಭಾವತಿ ನೀರು ಇಲ್ಲಿ ಬೆಂಗಳೂರು ಪಕ್ಕದಲ್ಲಿ ಬರುತ್ತಿದೆಯಲ್ಲಾ, ಈ ನೀರು ಎಂದು ತಿಳಿದುಕೊಳ್ಳಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಕಾವೇರಿ ನೀರು ಎಂದಾದರೆ ಕಾವೇರಿ ನೀರು, ಇಲ್ಲಿಯೇ ಹುಟ್ಟಿದ ಜಾಗ ಎಂದು ಹೇಳಿ. ಈ ಒಂದು ಮೂಲವನ್ನು ನೀವು ಹೇಳದೇ ಹೋದರೆ ನಿಮ್ಮ ಬಗ್ಗೆ ನಾವು ಸಂಶಯಪಡಲೇಬೇಕಾಗುತ್ತದೆ. ಇಲ್ಲದಿದ್ದರೆ ನಿಜವಾಗಿಯೂ ಅದಕ್ಕಿಂತ ಹಿಂದೆ ಕಾನೂನಿನಲ್ಲಿ ರಾಜ್ಯಾಂಗದಲ್ಲಿ ಹಿಂದಿನಿಂದ ವಸೂಲು ಮಾಡುವುದಕ್ಕೆ ನಿಮಗೆ ಅಧಿಕಾರದತ್ತವಾಗಿದ್ದರೆ ಮಾಡಿ. ಹಾಗಿದ್ದರೆ ಇನ್ನು ಐದು ವರ್ಷ ಹಿಂದೆ ಹೋಗಿ ಜಾಸ್ತಿ ದುಡ್ಡು ಬರುತ್ತದಲ್ಲಾ. ಇಲ್ಲದಿದ್ದರೆ ಎರಡು ವರ್ಷ ಮುಂದೆ ಬನ್ನಿ, ಅದೂ ಆಗುತ್ತದಲ್ಲಾ. ಆದ್ದರಿಂದ ಇದಕ್ಕೆ ರ್‍ಯಾಷಿಯೊನೇಲಿ ಬೇಕಾಗುತ್ತದೆ. There should be a rationale for this Time factor. You must explain it properly and convince us. ಆಮೇಲೆ ಈ ಸೆಕ್ಷನ್ 17ಎಫ್ ಎಫ್ ಗೆ ಒಂದು ಹೊಸ ತಿದ್ದುಪಡಿಯನ್ನು ತಂದಿದ್ದೀರಿ.

"Notwithstanding anything contained in this Act or any other law for the time being in force, the Planning Authority or any person authorised

by the State Government in this behalf, may regularise the buildings constructed in deviation of the sanctioned plan subject to payment of such penalty not less than the marked value of such deviated..."

ಇದೂ ಕೂಡ ಅಷ್ಟೇ ಇರತಕ್ಕಂಥದ್ದು. ಆಗಲೇ ನಾನು ಹೆಚ್ಚು ಕಡಿಮೆ ಇದನ್ನು ಹೇಳಿದ್ದೇನೆ. ಈ ವಾಕ್ಯ ಇದೆಯಲ್ಲಾ, ಇಲ್ಲಿಗೆ ಇದು ಒನ್ ಟೈಮ್ ಎಂದು ಇದರಲ್ಲಿ ಇಲ್ಲ. ಇದು ಕಾನೂನಿನಲ್ಲಿ ಹಾಗೆಯೇ ಮುಂದುವರಿಯುತ್ತದೆ. ನಾಳೆ ಇದನ್ನು ವಯಲೇಟ್ ಮಾಡಿದರೂ ಕೂಡ ಈ ಫೆನಾಲ್ಟಿಯನ್ನು ಕೊಟ್ಟರೆ ಅವನನ್ನು ರೆಗ್ಯುಲರೈಸ್ ಮಾಡುವುದಕ್ಕೆ ಅವಕಾಶ ಇದೆ. ಒಂದು ಟೌನ್ ಪ್ಲಾನಿಂಗನ್ನು ಎಫೆಕ್ಟೀವಾಗಿ ಇಂಪ್ಲಿಮೆಂಟ್ ಮಾಡುವುದು, ಇನ್ನೊಂದು ಟೌನ್ ಪ್ಲಾನಿಂಗನ್ನು ಡೀವಿಯೇಷನ್ ಮಾಡಿದ ಸಂದರ್ಭದಲ್ಲಿ ಅದನ್ನು ರೆಗ್ಯುಲರೈಸ್ ಮಾಡುವುದು with paying penalty ; ಎರಡೂ ಹೋಗುವುದಕ್ಕಾಗುವುದಿಲ್ಲ. ನಿಜವಾಗಿಯೂ ಎಲ್ಲಿಯಾದರೂ ಅಂಥ ಒಂದು ಪ್ರಬಲವಾದ ಸನ್ನಿವೇಶ ಇದ್ದರೆ ಆ ಸನ್ನಿವೇಶದಿಂದ ಏನಾದರೂ ಸಕ್ರಮ ಮಾಡಬೇಕು ಎಂದು ಸಾರ್ವಜನಿಕವಾಗಿ ಅದು ಹಿತವಾಗಿ ಕಂಡುಬಂದರೆ ಯಾವುದೋ ಒಂದು ಅವಧಿಗೆ ಮಾಡುವುದು ಅದು ಸಾಧು ಇರುತ್ತದೆ. ಆದರೆ ಇದು ನಿರಂತರವಾಗಿ ನಾವು ಟೌನ್ ಪ್ಲಾನಿಂಗ್ ಪ್ರಕಾರ ಎಲ್ಲಾ zonal Regulations ಫಾಲೋಮಾಡಿ ನಾವು ಲೈಸನ್ಸ್ ಕೊಡುವುದು, ಪರ್ಮಿಷನ್ ಕೊಡುವುದು. ಮತ್ತೆ ಅದನ್ನು ಡೀವಿಯೇಟ್ ಮಾಡಿದರು ಎಂದು ಹೇಳಿ ನಾವು ಅದನ್ನು ಸಕ್ರಮ ಮಾಡುವದು ಹಾಗಿದ್ದರೆ ಆಗಲೇ ನಾನು ವಾದ ಮಾಡಿದ ರೀತಿಯಲ್ಲಿ ಈ ಕಾನೂನಿನ ಅವಶ್ಯಕತೆಯೇ ಇರುವುದಿಲ್ಲ. ದಯವಿಟ್ಟು ಇಂಥ ಅನ್ಯಾಯ ಮಾತ್ರ ಮಾಡುವುದಕ್ಕೆ ಹೋಗಬೇಡಿ. ಕಾನೂನು ಇದ್ದೂ ಕೂಡ ಈ ವಂಚನೆ ಮೋಸಗಳು, ಅಕ್ರಮಗಳು ಇವತ್ತು ನಡೆದಿವೆ. ವಂಚನೆ ಮಾಡುವವರಿಗೆ ಕಾನೂನನ್ನು ಮಾಡುವುದಾದರೆ ಅದಕ್ಕಿಂತ ದ್ರೋಹ ಮತ್ತೊಂದು ಇರಲಿಕ್ಕೆ ಸಾಧ್ಯವಿಲ್ಲ. ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡಬೇಡಿ. ಏಕೆಂದರೆ ನಿಮ್ಮ ಈ ಪ್ರಯತ್ನದಿಂದ ಶಾಶ್ವತವಾಗಿ ಈ ಕಾನೂನನ್ನು ಉಳಿಸಿಕೊಂಡು ಅಕ್ರಮ ಮಾಡುತ್ತಲೇ ಇರಿ. ಮಾಡಿದಂಥ ಅಕ್ರಮವನ್ನು ನಾವು ಸಕ್ರಮ ಮಾಡುತ್ತಾ ಹೋಗುತ್ತೇವೆ ಎನ್ನುವ ಒಂದು ಅಪ್ರಮಾಣಿಕತನವನ್ನು ಇಷ್ಟೊಂದು ಬಹಿರಂಗವಾಗಿ ಎಕ್ಸಿಬಿಟ್ ಮಾಡುವುದಕ್ಕೆ ಹೋಗಬೇಡಿ. ಅವರಿಗೆ ವೀಳ್ಯ ಕೊಡಿ. ನೋಡಪ್ಪ, ನೀವು ಮಾಡಿಕೊಳ್ಳಿ ನಾಳೆ ಇಂಥ ಕಾನೂನನ್ನು ತಂದಿದ್ದೇವೆ, ನಾವು ಮಾಡಿ ಕೊಡುತ್ತೇವೆ ಎಂದು ಹೇಳಿ ಅಕ್ರಮ ಮಾಡುವ ಜನರಿಗೆ ಭ್ರಷ್ಟಾಚಾರದಲ್ಲಿ ತೊಡಗಿರುವ ಜನರಿಗೆ ನೀವಾಗಿಯೇ ಇಂಥ ಕಾನೂನಿನ ಮುಖಾಂತರ ಅವರಿಗೆ ವೀಳ್ಯ ಕೊಟ್ಟಂತೆ ಆಗುತ್ತದೆ. ಇದು ಸಾಧುವಲ್ಲ. ಮಾಡಲೂಬಾರದು. ಮಾಡುವುದಕ್ಕೆ ಹೋಗಬೇಡಿ. ಇದನ್ನು ಏತಕ್ಕೆ ಮಾಡುತ್ತೀರಿ? ಹೋಗುತ್ತಾ ಹೋಗುತ್ತಾ ಇನ್ನೂ ಆರೇಳು ತಿಂಗಳು ಇವೆ. ಶಿವಾ, ಹರಾ ಎಂದು ಹೇಳಿ ಇದ್ದರೆ ಇರಲಿ, ಹೋದರೆ ಹೋಗಲಿ ಜನರ ಅಭಿಪ್ರಾಯ ಏನು ಇದೆ ಎಂದು ಹೇಳಿ ಜನರಿಗೆ ಬಿಟ್ಟುಬಿಡೋಣ. ನಮ್ಮಲ್ಲಿ ಚಂದ್ರಗುತ್ತಿ ಜಾತ್ರೆ ಇದೆ. ಚಂದ್ರಮನ ಪಾದಕ್ಕೆ ಉಧೋ ಉಧೋ ಎಂದು ಗುಡ್ಡ ಹತ್ತ ಬೇಕಾದರೆ ಹೇಳುತ್ತಾ ಹೋಗುತ್ತಾರೆ. ಅಂದರೆ ನನ್ನದೆಲ್ಲಾ ನಿನ್ನ ಪಾದಕ್ಕೆ ಶರಣು ಎಂದು. ಜನರ ಪಾದಕ್ಕೆ ಶರಣು ಎಂದು ಹೋಗೋಣ. ನಿಮ್ಮನ್ನು ಆರಿಸಿದರೆ ನೀವೇ ಬರುತ್ತೀರಿ. ನಮ್ಮನ್ನು ಆರಿಸಿದರೆ

ನಾವೇ ಬರುತ್ತೇವೆ. ಈ ಉಧೋ ಎನ್ನುವ ಕಾಲಕ್ಕೆ ಇದನ್ನೆಲ್ಲಾ ಏಕೆ ಹಚ್ಚಿಕೊಳ್ಳುವುದಕ್ಕೆ ಹೋಗುತ್ತೀರಿ? ಈಗ ಇರುವುದು ಜನರ ಮುಂದೆ ಹೋಗುವುದು, ವಿವರಿಸಿ ಹೇಳಬೇಕು, ಮಾಡಬೇಕು. ಅದನ್ನು ಇಟ್ಟುಕೊಂಡು ಈ ಕೊಳೆ, ಈ ಪಾಪ, ಈ ಅನ್ಯಾಯವನ್ನು ಕಾನೂನು ಮುಖಾಂತರ ನೀವು ಮಾಡಿಟ್ಟು ಹೋಗುವುದು ಇದೆಯಲ್ಲಾ, ಇದು ದುರಂತವಾಗುತ್ತದೆ. ಅತ್ಯಂತ ದೊಡ್ಡ ಕೆಟ್ಟ ಕೆಲಸವೂ ಕೂಡ ಆಗುತ್ತದೆ. ದಯವಿಟ್ಟು ಈ ಮಸೂದೆಯನ್ನು ವಾಪಸ್ ತೆಗೆದುಕೊಳ್ಳಿ. ಬೇಕಾದರೆ ನಿಮಗೇನಾದರೂ ಸಾಧಕ-ಬಾಧಕಗಳು ವಿಚಾರ ಮಾಡಬೇಕಾದರೆ ಆಗ ಸೆಲೆಕ್ಟ್ ಕಮಿಟಿಗೆ ವಹಿಸಿದರೆ ನಿಮ್ಮಲ್ಲಿ ಎಲ್ಲರೂ ಕುಳಿತುಕೊಂಡು ವಿಚಾರ ಮಾಡೋಣ. ಅನೇಕರು ಟೌನ್‌ನಲ್ಲಿ ಕೆಲಸ ಮಾಡಿರುವವರು ಇದ್ದಾರೆ, ಮಂತ್ರಿಯಾಗಿ ಕೆಲಸ ಮಾಡಿರುವವರು ಎಲ್ಲಾ ಇದ್ದಾರೆ. ಬುದ್ಧಿವಂತರೆಲ್ಲಾ ಸೇರಿಕೊಂಡು ಸ್ವಲ್ಪ ಆಲೋಚನೆ ಮಾಡಿ ಇದರ ಸಾಧಕ-ಬಾಧಕವನ್ನು ನೋಡೋಣ. ಒಟ್ಟಾರೆ ನನ್ನ ಅಭಿಪ್ರಾಯವೇನೆಂದರೆ ನಾವು ಈಗ ಹೊಸ ಯುಗಕ್ಕೆ ಹೋಗುತ್ತಿದ್ದೇವೆ. ಹೊಸ ವಿಚಾರಗಳು ಬರಬೇಕಾಗಿದೆ. ಆಲೋಚನೆಗಳು ಬರಬೇಕಾಗಿದೆ. ಬೆಳವಣಿಗೆಯಲ್ಲಿ, ಚಿಂತನೆಯಲ್ಲಿ ನಡಿಗೆಯಲ್ಲಿ, ಆಲೋಚನೆಯಲ್ಲಿ ಹೋಗುತ್ತಿದ್ದೇವೆ. ಅದಕ್ಕನುಗುಣವಾಗಿ ನಮ್ಮ ಕಾನೂನುಗಳು ನಮ್ಮ ಹೆಜ್ಜೆಗಳು ಮುಂದುವರಿಯಬೇಕಾಗುತ್ತದೆ. ಅದನ್ನು ಮರೆತು ನಾವೇನಾದರೂ ಈ ಕಾಲದಲ್ಲಿ ತಪ್ಪು ಹೆಜ್ಜೆಗಳನ್ನು ಇಟ್ಟರೆ ನಾಳೆ ಮುಂದಿನ ಜನಾಂಗ ನಮ್ಮನ್ನೆಲ್ಲಾ ಶಪಿಸಬೇಕಾದಂಥ ಸಂದರ್ಭ ಬರುತ್ತದೆ. ಈ ಇತಿಹಾಸದ ದೋಷಕ್ಕೆ ನೀವು ದಯವಿಟ್ಟು ಗುರಿಯಾಗಬೇಡಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಈ ಒಂದು ಮಸೂದೆಯನ್ನು ಈಸದನ ತಿರಸ್ಕರಿಸಬೇಕೆಂದು ನಾನು ಅತ್ಯಂತ ಕಳಕಳಿಯಿಂದ ಕೇಳುತ್ತೇನೆ. ಆ ಕಡೆ ಕುಳಿತಂಥ ಅನೇಕ ಮಾನ್ಯ ಮಿತ್ರರಿಗೂ, ಮಾನ್ಯ ಸದಸ್ಯರಿಗೂ ಕೂಡ ವಿನಂತಿ ಮಾಡುತ್ತೇನೆ. ದಯವಿಟ್ಟು ಇದೇನು ಈ ಮಸೂದೆ ತಮ್ಮ ಪಾರ್ಟಿಯಲ್ಲಿ ಚರ್ಚೆಯಾಗಿದೆಯೋ ಇಲ್ಲವೋ ಗೊತ್ತಿಲ್ಲ. ದಯವಿಟ್ಟು ಸರ್ಕಾರ ಇದನ್ನು ತಂದಿದೆ ಎನ್ನುವ ಕಾರಣಕ್ಕಾಗಿ ತಾವು ಒಪ್ಪಿಗೆ ಕೊಡಬಾರದು ಎನ್ನುವ ಕಳಕಳಿಯ ಮನವಿಯನ್ನು ತಮ್ಮೆಲ್ಲರಲ್ಲೂ ಮಾಡಿಕೊಂಡು ಈ ಮಸೂದೆಯನ್ನು ತಿರಸ್ಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

10. ಪ್ರಕಟಣೆ

ಅಧ್ಯಕ್ಷರು : ಮಾನ್ಯ ದಿವಾಕರ್‌ಬಾಬು, ಯೋಗೇಶ್‌ಭಟ್‌ರವರೇ ಸದನ ಕಲಾಪಗಳ ಸಮಿತಿ ಈಗ ಸಭೆ ಸೇರಿತ್ತು. ಈ ಮಸೂದೆ ವಿಚಾರಕ್ಕೆ ಈಗ ಆತುರ ಪಡುವುದು ಬೇಡ ಎಂದು ಹೇಳಿ ಎಲ್ಲರೂ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಅದನ್ನೇನೂ ಪರ್ಯಾಲೋಚನೆಗೆ, ಅಂಗೀಕಾರಕ್ಕೆ ನಾವು ತೆಗೆದುಕೊಳ್ಳುವುದಿಲ್ಲ. ಅದರ ಚರ್ಚೆ ಮಾಡುವುದು ಬೇಡ. ಅದು ಬಂದಾಗ ನೀವು ಪಾರ್ಟಿಸಿಪೇಟ್ ಮಾಡಬಹುದು. ಅದನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳುತ್ತಾ ಇಲ್ಲ. ಕೈ ಬಿಟ್ಟಿದ್ದೇವೆ. ಅದರಿಂದ ಚರ್ಚೆ ಅನಗತ್ಯವಾಗುತ್ತದೆ. ಸದನ ಕಲಾಪಗಳ ಸಮಿತಿಯಲ್ಲಿ ನಾವು ಒಂದು ನಿರ್ಣಯಕ್ಕೆ ಬಂದಿದ್ದೇವೆ. ಈಗ ಪಂಚಾಯತ್‌ರಾಜ್ ಬಿಲ್ಲನ್ನು ತೆಗೆದುಕೊಳ್ಳೋಣ.